# ಪಾಂಸರಿ

ತಿಂಗಳ ಪತ್ರಿಕೆ

ನವಂಬರ್ : 2000

- ❄ ಜೀವರಹಿತ ಟಿಪ್ಪಣಿಗಳ ಚಿತ್ರ - 'ಸ್ಕ್ರಿಬಲ್ಸ್ ಆನ್ ಅಕ್ಕ'
- ❄ ಬೀದಿಯಲ್ಲಿಯ ಹೆಣ್ಣು ಮಕ್ಕಳು ಮತ್ತು ಜೀವನ
- ❄ ಜನವಿರೋಧಿ ಸುಪ್ರೀಂ ಕೋರ್ಟ್ ತೀರ್ಪು
- ❄ ಹಿಮಾಚಲ ಪ್ರದೇಶ ಮತ್ತು ಹರಿಯಾಣದಲ್ಲಿ ಲಿಂಗ ಸಂಬಂಧಗಳು ಮತ್ತು ಶಿಕ್ಷಣ
- ❄ ಮನೆಕೆಲಸ ಮಾಡುವ ಹೆಣ್ಣುಮಕ್ಕಳ ಬವಣೆ

# ಮಾನಸ

ತಿಂಗಳ ಪತ್ರಿಕೆ

ಸಂಪುಟ : 17 ಸಂಚಿಕೆ : 9

ನವಂಬರ್ : 2000





ವಿಳಾಸ

"ಮಾನಸ" ತಿಂಗಳ ಪತ್ರಿಕೆ

ಪಂಚಾಯಿತಿ ರಸ್ತೆ

ಕಾಡುಗೋಡಿ ಪೋಸ್ಟ್

ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **4-00** ರೂ.

ವಾರ್ಷಿಕ ಚಂದಾ **50-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ

ಒಟ್ಟು ಹನ್ನೊಂದು ಸಂಚಿಕೆಗಳು


## *ಈ ಸಂಚಿಕೆಯಲ್ಲಿ......*


ಜೀವರಹಿತ ಟಿಪ್ಪಣಿಗಳು ಚಿತ-'ಸ್ಕ್ರೀಬಲ್ಸ್ ಆನ್ ಅಕ್ಕ'

ಬೀದಿಯಲ್ಲಿಯ ಹೆಣ್ಣುಮಕ್ಕಳು ಮತ್ತು ಜೀವನ

*ಸಿ. ಡಿ. ವೆಂಕಟೇಶ್*

ಹಿಮಾಚಲ ಪ್ರದೇಶ ಮತ್ತು ಹರಿಯಾಣದಲ್ಲಿ ಲಿಂಗ ಸಂಬಂಧಗಳು ಮತ್ತು ಶಿಕ್ಷಣ

*ವೆಂ. ವನಜ*

ಮುಸ್ಲಿಂ ಪರ್ಸನಲ್ ಲಾನಲ್ಲಿ ಸುಧಾರಣೆಯ ಗಾಳಿ

ಮುಸ್ಲಿಮ್ ಮಹಿಳಾ ಆರ್ಗನೈಸೇಷನ್

*ಸವಿತ ಎ.*

ಮಹಿಳೆಯೆಂದರೆ......

*ಲಕ್ಷ್ಮಿ ಎ.*

ಜನವಿರೋಧಿ ಸುಪ್ರೀಂ ಕೋರ್ಟ್ ತೀರ್ಪು

ಸಾವು ಹಾಗೂ ವೈಧಮ್ಯದ ಆಚರಣೆ

*ರಾಜೇಶ್ವರಿ ಎಚ್. ಎಸ್.*

ವಿಧವೆಯರಾಗುವ ಕನಸು....

*ರಾಜೇಶ್ವರಿ ಎಚ್. ಎಸ್.*

ಉತ್ತರವಿಲ್ಲದೆ ಪ್ರಶ್ನೆಗಳು ಒಂದು ಪ್ರತಿಕ್ರಿಯೆ

*ರಾಜೇಶ್ವರಿ ಎಚ್. ಎಸ್.*

ಮನೆಕೆಲಸ ಮಾಡುವ ಹೆಣ್ಣುಮಕ್ಕಳ ಬವಣೆ

*ಜಯಶ್ರೀ*





ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ

ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭



# ಸಂಪಾದಕೀಯ

ಕೇಂದ್ರ ಸಂಸತ್ ಸಭೆಯು 1869ರ ಕ್ರಿಶ್ಚಿಯನ್ ಮಹಿಳೆಯರಿಗೆ ಸಂಬಂಧಿಸಿದ ವಿಚ್ಛೇದನಾ ಕಾಯಿದೆಯನ್ನು ತಿದ್ದುಪಡಿ ಮಾಡಲು ನಿರ್ಧರಿಸಿದೆ. ಕ್ರಿಶ್ಚಿಯನ್ ಮಹಿಳೆಯರಿಗೆ ಇದು ಪಕ್ಷಪಾತ ನೀತಿಯನ್ನು ಅನುಸರಿಸುತ್ತಿರುವುದರಿಂದ ಇದು ಅಪ್ರಸ್ತುತವಾಗಿದೆ. ಹಾಗಾಗಿ ತಿದ್ದುಪಡಿ ಮಾಡಬೇಕೆಂಬುದು ಸಂಸತ್ತಿನ ಆಶಯ. ಭಾರತೀಯ ವಿಚ್ಛೇದನಾ ಕಾಯಿದೆಯ ಸೆಕ್ಷನ್ 10A ಪ್ರಕಾರ ವಿವಾಹವನ್ನು ಅನೂರ್ಜಿತಗೊಳಿಸಬೇಕೆಂದು ಕೇಳುವ ಕ್ರಿಶ್ಚಿಯನ್ ಮಹಿಳೆ ಗಂಡನ ಅನೈತಿಕ ಸಂಬಂಧದ ಜೊತೆಗೆ ಇನ್ನಿತರ ತಪ್ಪುಗಳನ್ನು (ವಿವಾಹದೊಳಗಿನ ಸಂಬಂಧಗಳಲ್ಲಿ) ಸಹ ಸಾಬೀತುಗೊಳಿಸುವ ಜವಾಬ್ದಾರಿಯನ್ನು ಹೊಂದಿದ್ದಾಳೆ. ಆದರೆ ಗಂಡ ಆಕೆಯನ್ನು ವಿಚ್ಛೇದನಗೊಳಿಸಲು ಆಕೆಯ ಅನೈತಿಕ ಸಂಬಂಧವನ್ನು ಸಾಬೀತು ಮಾಡಿದರೆ ಸಾಕು! ಇದು ಮಹಿಳೆಯ ಬಗ್ಗೆ ಪಕ್ಷಪಾತ ಮಾಡಿ ಅನ್ಯಾಯ ಮಾಡುವುದರಿಂದ ಇದನ್ನು ತಿದ್ದುಪಡಿ ಮಾಡಲಾಗುತ್ತದೆ ಎಂದು ಸಂಸತ್ ಅಧಿವೇಶನದ ನಿಲುವು.

ಕ್ರಿಶ್ಚಿಯನ್ ಮಹಿಳಾ ಸಂಘಟನೆಗಳಿಂದ ಹಲವಾರು ರೀತಿಯ ಕಾನೂನು ಬದಲಾವಣೆಗಳಿಗೆ ಬೇಡಿಕೆಗಳಿರುವಂತೆ ಮುಸ್ಲಿಂ ಹಾಗೂ ಹಿಂದೂ ಮಹಿಳೆಯರೂ ಸಹ ವಿವಾಹಕ್ಕೆ ಸಂಬಂಧಪಟ್ಟಂತೆ ಅನೇಕ ಬದಲಾವಣೆಗಳಾಗಬೇಕೆಂದು ಬೇಡಿಕೆಗಳನ್ನಿಡುತ್ತಲೇ ಬಂದಿದ್ದಾರೆ.

ಇತ್ತೀಚೆಗೆ ಅಕ್ಟೋಬರ್ 28, 2000ದ ಸಂದರ್ಭದಲ್ಲಿ ಮೂರು ದಿನಗಳ ಕಾಲ ನಡೆದ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಸಮಿತಿಯು ತನ್ನ ಸರ್ವ ಸಾಮಾನ್ಯ ಸಭೆಯನ್ನು ನಡೆಸಿದ ಸಂದರ್ಭದಲ್ಲಿ ಮುಸ್ಲಿಂ ಮಹಿಳಾ ಆರ್ಗನೈಜೇಶನ್ 'ನಿಖಾನಾಮ್', ಜೊತೆಗೆ ವರದಕ್ಷಿಣೆ, ಹಾಗೂ ತಲಾಖ್ ಬಗ್ಗೆ ಸ್ಪಷ್ಟತೆಗಳನ್ನು ಕೇಳಿ ಮಹಿಳೆಯರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಕೇಳಿ ಕೊಂಡಿದ್ದಾರೆ.

ಹಿಂದೂ 'ವಿವಾಹ ವಿಚ್ಛೇದನ' ಕಾನೂನು ಕಟ್ಟಳೆಗಳೂ ಸಹ ಮಹಿಳೆಯರಿಗೆ ಪೂರಕವಾಗಿಯೇನೂ ಇಲ್ಲ. ಇಂದಿಗೂ ಕೂಡಾ ಗಂಡನ ತಪ್ಪುಗಳನ್ನು ಸಾಬೀತುಗೊಳಿಸುವ ಜವಾಬ್ದಾರಿ ಮಹಿಳೆಯ ತಲೆಯ ಮೇಲೆಯೇ ಇದೆ. ಈ ಹಂತದಲ್ಲಿಯೇ ಮಹಿಳೆಯರು ನಲುಗಿ ಹೋಗುತ್ತಾರೆ.

ಈ ಎಲ್ಲಾ ವರ್ಗಗಳ ಮಹಿಳೆಯರ ಒತ್ತಡ, ಚಳುವಳಿಗಳು ವಿಚ್ಛೇದನ ಕಾನೂನಿನಲ್ಲಿ ಮಹಿಳೆಯರಿಗೆ ಅನ್ಯಾಯವಾಗದಂತಹ ಬದಲಾವಣೆಗಳನ್ನು ತರುವಲ್ಲಿ ಸಫಲವಾಗಬಹುದೇನೋ ಎಂಬುದನ್ನು ನಾವು ಕಾದು ನೋಡಬೇಕಾಗಿದೆ.

○

# ಜೀವರಹಿತ ಟಿಪ್ಪಣಿಗಳ ಚಿತ್ರ - 'ಸ್ಕ್ರಿಬಲ್ಸ್ ಆನ್ ಅಕ್ಕ'

12ನೆಯ ಶತಮಾನದ ಅಕ್ಕ ಮಹಾದೇವಿಯನ್ನು ಜಾತಿ, ಮತ, ಭಾಷೆ, ದೇಶ, ವರ್ಗಗಳ ಮಿತಿಗಳನ್ನು ಮೀರಿ ಮಹಿಳೆಯರ ಬದುಕಿನ ಹಿನ್ನೆಲೆಯಲ್ಲಿ ಅರ್ಥೈಸುವ ಮಹಾತ್ವಾಕಾಂಕ್ಷೆಯಿಂದ ಮಧುಶ್ರೀದತ್ತರವರು 'ಸ್ಕ್ರಿಬಲ್ ಆನ್ ಅಕ್ಕ' ಎಂಬ ಒಂದು ತಾಸಿನ ಚಿತ್ರವನ್ನು ತಯಾರಿಸಿದ್ದಾರೆ. ಬೆಂಗಳೂರಿನಲ್ಲಿ ಹಲವಾರು ಕಡೆ ಈ ಚಿತ್ರ ಪ್ರದರ್ಶನಗಳಲ್ಲಿ ನಿರ್ದೇಶಕಿ ಸಹ ಹಾಜರಿದ್ದರು. ಅಕ್ಕನ ಬದುಕು ಹಾಗೂ ವಚನಗಳ ಹಿನ್ನೆಲೆಯಲ್ಲಿ ಸಂದರ್ಶನಗಳು, ನಾಟಕಗಳು, ಸ್ಥಳದ ವಿವರಗಳು, ನಟನೆಗಳು, ಸಾಂಕೇತಿಕ ಸನ್ನಿವೇಶಗಳು ಹಾಗೂ ಹಲವಾರು ಸಂಕೇತಗಳ ಹಿನ್ನೆಲೆಯಲ್ಲಿ 'ಸ್ಕ್ರಿಬಲ್ಸ್ ಆನ್ ಅಕ್ಕ' ಚಿತ್ರ ಸಿದ್ಧಗೊಂಡಿದೆ. ಪ್ರತಿ ವರ್ಷ ನಡೆಯುವ ಅಕ್ಕ ಮಹಾದೇವಿಯ ಜಾತ್ರೆಯ ಸಂದರ್ಭದಲ್ಲಿ ಆಕೆಯ ಚಿತ್ರಗಳನ್ನು, ಪೇಯಿಂಟಿಂಗ್ಸ್‌ಗಳನ್ನು ಪ್ರದರ್ಶನ ಮಾಡುತ್ತಾ ಬರುವ ಸಂಪ್ರದಾಯದಿಂದ ಪ್ರಾರಂಭವಾಗುವ ಚಿತ್ರ, ಕೊನೆಯಲ್ಲಿ ಹಲವಾರು ಪುರುಷರು ತಾವು ಹಿಡಿದುಕೊಂಡ ಚಿತ್ರಗಳನ್ನು ಕೊರಡಿಯಲ್ಲಿಟ್ಟು ಹೊದಿಕೆ ಹೊದಿಸುವ ಮಧ್ಯದ ಅಂತರದಲ್ಲಿ 'ಸ್ಕ್ರಿಬಲ್ಸ್ ಆನ್ ಅಕ್ಕ' ರೂಪಿತಗೊಂಡಿದೆ. ಅಂತ್ಯದಲ್ಲಿ ಚಿಕ್ಕ ಚಿಕ್ಕ ಮಕ್ಕಳು ಬರಿಯ ಮೈಯಲ್ಲಿ ಮರ ಸುತ್ತುತ್ತಾ, ಅಕ್ಕನ ವಚನವನ್ನು ಹಾಡುತ್ತಾ ಓಡುವ ಸನ್ನಿವೇಶದಲ್ಲಿ ಚಿತ್ರದ ಆಶಯವನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ.

ಸಂದರ್ಶನ, ನಾಟಕ, ನಟನೆಗಳನ್ನು ಇಡಿಯ ಚಿತ್ರದಲ್ಲಿ ಎರಡು ಭಿನ್ನ ಸ್ತರಗಳಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ. ಅಕ್ಕನ ಜನ್ಮ ಸ್ಥಳವಾದ ಉಡತಡಿಯಲ್ಲಿ ಆಕೆಯ ದೇವಾಲಯದ ಸ್ಥಳದಲ್ಲಿ ಓಡಾಡುವ ಸೀಮಾ ಬಿಶ್ವಾಸ್ ಆಧುನಿಕ ಮನಸ್ಸಿನ ಹುಡುಕಾಟವನ್ನು ಪ್ರತಿಬಿಂಬಿಸುತ್ತಾರೆ. ಆಧುನಿಕ ಬದುಕಿನ ಆಯಾಮಗಳಲ್ಲಿ ಅಕ್ಕನನ್ನು ಅರ್ಥೈಸಲು ಎಂಬಂತೆ ಆಕೆಯ ಓಡಾಟ ರೂಪಿತಗೊಂಡಿದೆ. ನಂತರ ಅನೇಕ ಸಂದರ್ಭಗಳ ಮೂಲಕ ಮಹಾದೇವಿಯ ಬದುಕಿನ ಬಗ್ಗೆ, ಬದುಕಿನ ಅರ್ಥಗಳ ಬಗ್ಗೆ ಗಮನ ಸೆಳೆಯಲು ಪ್ರಯತ್ನಿಸಲಾಗಿದೆ.

ಕನ್ನಡದ ಲಯವಿರದ ಕನ್ನಡ ಭಾಷೆಯ ಸಂದರ್ಶನದ ದಾಟಿ ನೋಡುಗರಲ್ಲಿ ಮುಜುಗರ ಹುಟ್ಟಿಸುತ್ತದೆ. ಜೊತೆಗೆ ಸಂದರ್ಶನದ ಪ್ರಶ್ನೆಗಳು ಅಕ್ಕನ ಜೀವನದ ಬಗ್ಗೆ ಗಂಭೀರವಾದ ಮಾಹಿತಿಗಳನ್ನು ನೀಡುವ ಬದಲು ಹಾಸ್ಯಾಸ್ಪದವಾಗಿ ಧ್ವನಿಸುವುದು ಅಕ್ಕನ ಜೀವನವನ್ನು ವಿಡಂಬಿಸುವಂತೆ ಕಾಣುತ್ತದೆ. ಉದಾ: "ನೀವು ಅಕ್ಕನ ತರಹ ಆಗೋಕೆ ಇಷ್ಟ ಪಡ್ತೀರ";? 'ನಿಮ್ಮ ಮಗಳನ್ನು ಅಕ್ಕನ ತರಹ ಆಗೋಕೆ ಬಿಡ್ತೀರಾ'? ಅಕ್ಕನ ತರಹ ಬೆತ್ತಲೆ ಹೋಗೋಕೆ ಬಿಡ್ತೀರಾ? ಇಂತಹ ಪ್ರಶ್ನೆಗಳು ನೋಡುಗರಲ್ಲಿ ನಗುವಿನೊಟ್ಟಿಗೆ ವಿಷಾದವನ್ನು ಹುಟ್ಟಿಸುತ್ತವೆ. ಇನ್ನೊಂದು ಸ್ತರದಲ್ಲಿ, ನೀಲಿಮಾ ಶೇಖ್‌ರವರ ಪೇಯಿಂಟಿಂಗ್‌ನಲ್ಲಿ ಅಕ್ಕನ ಬದುಕಿನ ಬಗ್ಗೆ ಚರ್ಚಿಸಲು ಪ್ರಯತ್ನಿಸಲಾಗಿದೆ. ನೀಲಿಮಾ ಶೇಖ್ ಅಕ್ಕನ ಬೆತ್ತಲೆಯ ದೇಹದ ಬಗ್ಗೆ ಕೊಡುವ ಒತ್ತನ್ನು ಆಕೆಯ ಬದುಕಿನ ಆಯಾಮಗಳಿಗೆ ಕೊಡುವಂತೆ ಕಾಣುವುದಿಲ್ಲ. ಅಕ್ಕನ ಬದುಕಿನಲ್ಲಿ ರ‍್ಯಾಡಿಕಲ್ ಅಂಶಗಳು ಬಿಂಬಿತವಾಗುವುದು ಆಕೆ ಬೆತ್ತಲಾಗಿ ನಡೆವಲ್ಲಿ ಎಂಬ ಧ್ವನಿಯಿಂದಾಗಿ ನವ್ಯರ ಕಲಾ ಮಾದರಿಯಂತೆ ಬೆತ್ತಲಾಗುವುದು ಅತ್ಯಂತ ಶ್ರೇಷ್ಠ ಕ್ರಾಂತಿಕಾರಕ ವಿಚಾರವಾದಂತೆ ಕಾಣುತ್ತದೆ. ನೀಲಿಮಾ ಶೇಖ್ ಈ ಹಳ ಹಳಿಕೆಯಲ್ಲಿಯೇ ಅಕ್ಕನನ್ನು ಅರ್ಥೈಸಿಕೊಂಡು ಪೇಯಿಂಟಿಂಗ್ ಮಾಡಿದಂತೆ ಚಿತ್ರದಲ್ಲಿ ವ್ಯಕ್ತವಾಗುತ್ತದೆ. ಅವರ ಪೇಯಿಂಟಿಂಗ್ಸ್ ಕೂಡಾ ಅಕ್ಕನ ಬೆತ್ತಲಾಕಾರದ ಮೇಲೆ ಹೆಚ್ಚು ಒತ್ತು ನೀಡಿವೆ.

ಅಕ್ಕನ ಬದುಕನ್ನು ಉಡುತಡಿ ಕ್ಷೇತ್ರದಲ್ಲಿ ಜಾತ್ರೆ, ಅಕ್ಕನ ಬಗೆಗಿನ ನಾಟಕ, ಸಂದರ್ಶನಗಳ ಮೂಲಕ ವಿವರಿಸಲು ಯತ್ನಿಸುತ್ತಲೇ ಅನುಭವ ಮಂಟಪದಲ್ಲಿ ಕಿನ್ನರಿ ಬೊಮ್ಮಯ್ಯನ ಪ್ರಶ್ನೆಗಳಿಗೆ ಅಕ್ಕ ಉತ್ತರಿಸುವುದನ್ನು ನಾಟಕದ ಮೂಲಕ ಸಾಂಕೇತಿಕವಾಗಿ ಧ್ವನಿಸಲು ಪ್ರಯತ್ನಿಸಲಾಗಿದೆ. ಈ ಎರಡೂ ಸ್ತರಗಳ ಮೇಳೈಸುವಿಕೆ ಚಿತ್ರದಲ್ಲಿ ನಮಗೆ ಕಾಣಿಸುವುದೇ ಇಲ್ಲ. ಇವೆರಡೂ ಭಿನ್ನ ಸ್ತರಗಳಾಗಿಯೇ ಉಳಿದು ಅಕ್ಕನ ಜೀವನ ಕೂಡಾ ತುಂಡು ತುಂಡು ನೋಟದಲ್ಲಿ ಕಾಣಿಸುತ್ತದೆಯೇ ಹೊರತು ಒಟ್ಟಾದ ಒಂದು ನೋಟ ಚಿತ್ರದಲ್ಲಿ ದೊರೆಯುವುದಿಲ್ಲ.

ಈ ಎರಡೂ ಬಂಧಗಳ ನಡುವೆ ಮಣಿಪುರಿಯ ಮಧ್ಯ ವಯಸ್ಕ ಮಹಿಳೆಯೊಬ್ಬಳು ಕೋಲು ಹಿಡಿದ ಸ್ಥಿರ ನಡುಗೆಯಲ್ಲಿ ಆಗಾಗ್ಗೆ ಹಾದು ಹೋಗುವುದು, ಕಾಡಿನಲ್ಲಿ ನಡೆದಾಡುವುದು,

ಕೊನೆಗೊಮ್ಮೆ ಪೂರ್ತಿ ಬೆತ್ತಲಾಗಿ ನಡೆಯುವುದು ಸಾಂಕೇತಿಕವಾಗಿ ಧ್ವನಿಸುವುದರಲ್ಲಿ ಯಶಸ್ವುಗೊಂಡಿದೆ. ಅಕ್ಕನ ಹಾಗೆಯೇ ಸ್ವಂತದ ಹುಡುಕಾಟವನ್ನು ಧ್ವನಿಸುತ್ತ ನಮ್ಮ ಒಳಗನ್ನು ನಾವು ಬೆತ್ತಲೆ ಮಾಡಿಕೊಂಡಂತೆ, ಹೊರಗೆ ಬೆತ್ತಲಾಗುವ ಧೈರ್ಯ, ಶಕ್ತಿಗಳನ್ನು ಇದು ಸಾಂಕೇತಿಕವಾಗಿ ಧ್ವನಿಸುತ್ತದೆ.

ಈ ಚಿತ್ರದ ಸೋಲಿಗೆ ಹಲವಾರು ಕಾರಣಗಳಿವೆ. ವಚನಗಳನ್ನು ಹಾಡಿದ ರೀತಿ ತಮಾಷೆಯಾಗಿ ಕಾಣಿಸುತ್ತದೆ. ವಚನಗಳನ್ನು ಸುಂದರವಾಗಿ ಹಾಡಿದ್ದರೂ, ಆ ಮಾಧುರ್ಯ ಅಕ್ಕನ ವಚನಗಳ ಸ್ಫೂರ್ತಿಯನ್ನು ಕಾದುಬಿಡುತ್ತಿತ್ತು.

ಸನ್ನಿವೇಶಗಳನ್ನು ಆಯ್ಕೆ ಮಾಡುವಾಗ ಕೂಡಾ ನಿರ್ದೇಶಕಿ ಸಂಪೂರ್ಣವಾಗಿ ಸೋತಿದ್ದಾರೆ. ಅಕ್ಕ ಮಹಾದೇವಿಯ ಹೆಸರಿನಲ್ಲಿ ನಡೆಸುವ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಫ್ಯಾಕ್ಟರಿಯ ಮಹಿಳೆಯರೊಟ್ಟಿಗಿನ ಸಂದರ್ಶನದ ರೀತಿ ಅಪ್ರಬುದ್ಧವಾಗಿದೆ. ಉತ್ತರ ಕರ್ನಾಟಕ, ಗುಲ್ಬರ್ಗ, ವಿಜಾಪುರದಲ್ಲಿ ಅಕ್ಕ ಹಾಗೂ ಇತರ ವಚನಕಾರರ ಮಾಹಿತಿಗಳನ್ನು ಹಾಗೂ ಅವಶೇಷಗಳನ್ನು ಉಳಿಸಿಕೊಳ್ಳುವುದರೊಟ್ಟಿಗೆ ಅವರ ಬದುಕಿನೊಡನೆ ಸಾಂಗತ್ಯ ಸಾಧಿಸುವ ಪ್ರಯತ್ನದಲ್ಲಿ ತಮ್ಮ ಬದುಕಿನಲ್ಲಿಯೇ ಕೆಲವು ವೈಶಿಷ್ಟ್ಯ ಉಳಿಸಿಕೊಂಡ ಜನರಿದ್ದಾರೆ. ಅವರ ಬದುಕಿನ ರೀತಿಗಳಲ್ಲಿಯೇ ಅಕ್ಕನ ಬದುಕಿನ ಬಗ್ಗೆಗಿನ ಮಾಹಿತಿಯನ್ನು ಹೆಚ್ಚು ಸುಲಭವಾಗಿ ಗ್ರಹಿಸಬಹುದಿತ್ತು. ಇವರು ಆರಿಸಿಕೊಂಡ ಸನ್ನಿವೇಶಗಳು ಅತ್ಯಂತ ಮೇಲ್ಮಟ್ಟದ ರೀತಿಯಲ್ಲಿಯೇ ಉಳಿದುಕೊಂಡು ನಿರ್ದೇಶಕಿಯ ಗ್ರಹಿಕೆಗೆ ಅಕ್ಕ ದಕ್ಕದಿರುವುದನ್ನೂ ಹಾಗೂ ಆಕೆಗೆ ಏನು ಹೇಳಬೇಕೆಂಬ ಸ್ಪಷ್ಟತೆ ಇಲ್ಲದಿರುವುದನ್ನು ವ್ಯಕ್ತಗೊಳಿಸುತ್ತದೆ.

ಅಕ್ಕ ಚೆನ್ನ ಮಲ್ಲಿಕಾರ್ಜುನನನ್ನು ಹುಡುಕಿಕೊಂಡು ಹೋಗುವ ಬಗೆಯಲ್ಲಿಯೇ ಕ್ರಿಶ್ಚಿಯನ್ ಸಮುದಾಯದಲ್ಲಿ ಕ್ರೈಸ್ತನನ್ನು ನನ್‌ಗಳು ಮದುವೆಯಾಗುತ್ತಾರೆ ಎಂಬಂತಹ ಎರೆಡರ ಮಧ್ಯೆ ಹೋಲಿಕೆ ತಂದಿರುವುದು ತೀರಾ ಬಾಲಿಶವಾಗಿದೆ. ಕ್ರೈಸ್ತ ಧರ್ಮದಲ್ಲಿನ ನನ್‌ಗಳಾಗುವ ಮಹಿಳೆಯರ ಬದುಕು ಒಂದು ಸಂಸ್ಥೆಯಿಂದ ಪ್ರೇರೇಪಿತ ವಾದುದು. ಒಂದು ಚೌಕಟ್ಟಿನ ಒಳಗೆ ನಡೆಯುವಂತಹದು. ಆದರೆ ಅಕ್ಕನ ಬದುಕಿನ ಸ್ಫೂರ್ತಿ ಈ ರೀತಿಯ ಸಾಂಸ್ಥಿಕವಾದದ್ದು ಅಲ್ಲ. ಚೌಕಟ್ಟುಗಳ ಒಳಗಿರುವುದೂ ಅಲ್ಲ. ಅಲ್ಲಿ ಸ್ವತಂತ್ರ್ಯ ಹುಡುಕಾಟದ ನೆಲೆ ಇದೆ. ಕ್ರಿಶ್ಚಿಯನ್ ಸಮುದಾಯದಲ್ಲಿ ಮಹಿಳೆಯರನ್ನು ನನ್‌ಗಳಾಗಿಸುವ ವ್ಯವಸ್ಥೆಯ ಹಿಂದೆಯೇ ಸಾಕಷ್ಟು ಒತ್ತಡಗಳಿವೆ. ಪ್ರಶ್ನೆಗಳಿವೆ, ಒತ್ತಡಗಳಿವೆ. ಹಾಗಾಗಿಯೇ ಈ ಹೋಲಿಕೆ ಬಾಲಿಶಃ ಎಂದು ಮೇಲೆ ಹೇಳಿದ್ದು.

ಹನ್ನೆರಡನೆಯ ಶತಮಾನದಲ್ಲಿ ಅಕ್ಕನ ಇಡಿಯ ವ್ಯಕ್ತಿತ್ವಕ್ಕೆ ವಚನಕಾರರ ಚಳುವಳಿಯ ಒತ್ತಾಸೆಯಿತ್ತು. ಆಕೆ ಒಬ್ಬ ವ್ಯಕ್ತಿಯಾಗಿ ಚಳುವಳಿಯ ಒತ್ತಾಸೆಯಿತ್ತು. ಆಕೆ ಒಬ್ಬ ವ್ಯಕ್ತಿಯಾಗಿ ಮೂಡಿ ಬಂದವಳಲ್ಲ. ಆಕೆಯಾಟ್ಟಿಗೆ ಇನ್ನೂ ಹನ್ನೊಂದು ವಚನಕಾರ್ತಿಯರು ಬೇರೆ ಬೇರೆ ವಿಚಾರ ಕುರಿತು ಮಾತನಾಡಿದ ದಾಖಲಾತಿಗಳಿವೆ. ಇಂತಹದರ ಬಗ್ಗೆ ಚಿತ್ರದಲ್ಲಿ ಎಲ್ಲಿಯೂ ಯಾವ ಬಗೆಯ ಸುಳಿವೂ ಸಿಗುವುದಿಲ್ಲ. ಹಾಗಾಗಿಯೇ ಚಿತ್ರ ಅಕ್ಕನ ಬಗ್ಗೆ ಒಂದು ಇಡಿಯಾದ ನೋಟವನ್ನು ಕೊಡುವುದಿಲ್ಲ.

ಜಾಗತೀಕರಣದ ಸಂದರ್ಭದಲ್ಲಿ ಮಹಿಳೆಯರ ಬದುಕು ಹರಿದು ಹಂಚಿ ಹೋಗತೊಡಗಿವೆ. ಮಧ್ಯಮ ವರ್ಗದ ಮಹಿಳೆಯರು ಎಲ್ಲಾ ಬಗೆಯ ಗ್ರಾಹಕ ವಸ್ತುಗಳ ಗ್ರಾಹಕರಾಗಿ ಜಾಹೀರಾತುಗಳಿಂದ ರೂಪಿತಗೊಳ್ಳ ತೊಡಗಿದ್ದಾರೆ. ಇಂತಹ ಸಂದರ್ಭದಲ್ಲಿ ಅಕ್ಕ ನಮಗೆ ಇನ್ನಷ್ಟು ಮುಖ್ಯವಾಗುತ್ತಾಳೆ. 70-80ರ ದಶಕದಲ್ಲಿ ಅಕ್ಕ ಪ್ರತಿಭಟನೆಯ ಮಾದರಿಯಾಗಿ ನಮಗೆ ಧ್ವನಿಸಿದ್ದರೆ, ಜಾಗತೀಕರಣದ ಹಂತದಲ್ಲಿ ಆಕೆಯ ಸ್ಪಿರಿಚಯಲ್ ಆಯಾಮಗಳು ಇನ್ನಷ್ಟು ಅರ್ಥವಂತಿಕೆ ಪಡೆದುಕೊಂಡು ಬೇರೆ ಬೇರೆ ಆಯಾಮಗಳಲ್ಲಿ ನಮಗೆ ಮುಖ್ಯಳಾಗುತ್ತಾಳೆ. ನಿರ್ದೇಶಕಿ ಈ ಕಡೆಗೆ ಕೂಡಾ ಯಾವುದೇ ರೀತಿಯ ನೋಟವನ್ನು ಹರಿಸಿಲ್ಲ. ಹೀಗೆ ಹಲವಾರು ಕಾರಣಗಳಿಂದ 'ಸ್ಕ್ರಿಬಲ್ಸ್ ಆನ್ ಅಕ್ಕ' ಬರಿಯ ಟಿಪ್ಪಣಿಗಳಾಗಿಯೇ ಉಳಿದುಬಿಟ್ಟಿದೆ.

●

ಮಾನಸದ ಪ್ರಕಟಣೆ ಮಾನಸದ ಓದುಗರ ಆರ್ಥಿಕ ನೆರವನ್ನು ಅವಲಂಬಿಸಿದೆ. ಓದುಗರು ಚಂದಾ ನವೀಕರಣದ ಸೂಚನೆ ಬಂದ ಕೂಡಲೇ ಚಂದಾ ನವೀಕರಿಸಿ ಸಹಕರಿಸಬೇಕೆಂದು ಕೋರುತ್ತೇವೆ.

*ಸಂ. ಮಂಡಲಿ*

# ಬೀದಿಯಲ್ಲಿಯ ಹೆಣ್ಣು ಮಕ್ಕಳು ಮತ್ತು ಜೀವನ

○ ಸಿ. ಡಿ. ವೆಂಕಟೇಶ್

ಇತ್ತೀಚಿನ ದಿನಗಳಲ್ಲಿ ಕುಟುಂಬದ ಮಾರ್ಗದರ್ಶನ ಹಾಗೂ ಆಶ್ರಯ ತಪ್ಪಿದ ಹಲವು ಮಕ್ಕಳಿಗೆ ಸರ್ಕಾರ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಬೆಂಬಲ ದೊರೆಯದ ಸಾವಿರಾರು ಮಕ್ಕಳು ಬೀದಿ ಪಾಲಾಗುತ್ತಿದ್ದಾರೆ. ಮಕ್ಕಳ ಹಕ್ಕುಗಳ ಬಗ್ಗೆ ಕಾನೂನುಗಳು. ನೀತಿಗಳು ಈ ದೇಶದಲ್ಲಿ ಅನೇಕವಿದ್ದರೂ ಸಾವಿರಾರು ಮಕ್ಕಳು ಬೀದಿ ಪಾಲಾಗುತ್ತಿದ್ದಾರೆ. ಶಾಲೆಯಲ್ಲೋ, ಮನೆಯಲ್ಲೋ ಇರಬೇಕಾದ ಮಕ್ಕಳು ಬೀದಿಯಲ್ಲಿರುವುದು, ಸಮಸ್ಯೆಯಾಗಿ ಪರಿಣಮಿಸುತ್ತಿರುವುದು ಸಮಾಜದ ವಿಪರ್ಯಾಸಗಳಲ್ಲಿ ಒಂದು.

**ಯಾರು ಈ ಬೀದಿ ಮಕ್ಕಳು?**

ಯುನಿಸೆಫ್ ತನ್ನ ವರದಿಯಲ್ಲಿ "ಬೀದಿ ಮಕ್ಕಳು ಬೀದಿಯಲ್ಲೇ ವಾಸಿಸುತ್ತಾ ಬೀದಿಯೇ ಅವರಿಗೆ ನಿಜವಾದ ಕುಟುಂಬ ಅಥವಾ ಹೆಚ್ಚಿನದಾಗಿ ಮನೆ ಎಂಬುದಾಗಿ ಕಂಡುಬರುತ್ತದೆ. (ವಿಶಾಲವಾದ ನಗರದಲ್ಲಿ ಅನಿಶ್ಚಿತವಾದ ವಾಸಸ್ಥಳ, ಅಂಗಡಿಗಳ ಮುಂದೆ, ಬಸ್‌ನಿಲ್ದಾಣ, ಬೀಳುಭೂಮಿ ಇತ್ಯಾದಿ) ಈ ಪರಿಸ್ಥಿತಿಯಲ್ಲಿ ಜವಾಬ್ದಾರಿಯುತ ಪೋಷಕರ ರಕ್ಷಣೆ ಇರುವುದಿಲ್ಲ" ಎಂದು ತಿಳಿಸಿದೆ. ಬೀದಿ ಮಕ್ಕಳು ಎಂದು ಗುರುತಿಸಬೇಕಾದರೆ ಅನೇಕ ಕಾರಣಗಳಿವೆ. ಬೀದಿಯಲ್ಲೇ ಹುಟ್ಟಿ, ಬೀದಿಯಲ್ಲೇ ಬೆಳೆದಿರುವವರು ಅನೇಕರಾದರೆ, ಒಂದು ಕುಟುಂಬ ವ್ಯವಸ್ಥೆಯಲ್ಲಿ ಜನಿಸಿ,ಕುಟುಂಬದಲ್ಲಿ ಬದುಕುವುದು ಅಸಹನೀಯವಾದಾಗ ಅಲ್ಲಿಂದ ಹೊರಬಂದು ಬೀದಿಯನ್ನು ಆಶ್ರಯಿಸುವವರು ಬಹುಮಂದಿ ಇದ್ದಾರೆ. ಬೀದಿಮಕ್ಕಳು ಬಡತನದಲ್ಲಿಯೇ ತಮ್ಮ ಜೀವನದ ಬಹುಭಾಗವನ್ನು ಸವೆಸಿರುತ್ತಾರೆ. ಅವರಲ್ಲಿ ಹಲವರಿಗೆ ಮಾತ್ರ ಈ ಬಡತನದ ಜೀವನದಿಂದ ಹೊರಬರಲು ಸಾಧ್ಯವಾಗುತ್ತದೆ. ಒಂದು ನಿಶ್ಚಿತ ನೆಲೆಯಿದ್ದು ಅಥವಾ ನೆಲೆಯಿಲ್ಲದೆ. ಸಾಮಾಜಿಕ -ಆರ್ಥಿಕ ಭದ್ರತೆಯಿಂದ ವಂಚಿತರಾಗಿರುವ ಮಕ್ಕಳು ಬೀದಿಮಕ್ಕಳಾಗುವ ಸಾಧ್ಯತೆಗಳು ಅಧಿಕವಿವೆ. ಇಂದು ಭಾರತದಲ್ಲಿ ಬೀದಿಮಕ್ಕಳ ಸಮಸ್ಯೆಯು ಬೃಹದಾಕಾರವಾಗ ಬೆಳೆದು ನಿಂತಿದೆ. ಭಾರತದಲ್ಲಿ 18 ಬಿಲಿಯನ್ ಬೀದಿ ಮಕ್ಕಳಿದ್ದಾರೆ. ಎಂದು "ಇಕಾನಾಮಿಕ್ ಪೊಲಿಟಿಕಲ್ ವೀಕ್ಲಿ" ವರದಿ ಮಾಡಿದೆ.

**ಬೀದಿಯಲ್ಲಿ ಹೆಣ್ಣು ಮಕ್ಕಳು**

ಬಹುತೇಕ ಭಾರತೀಯರು ಕುಟುಂಬದ ಸಾಂಸ್ಥಿಕ ಚೌಕಟ್ಟಿನಲ್ಲಿ ಜೀವನ ನಡೆಸುತ್ತಿರುವುದು ಇಂದಿಗೂ ಕಂಡು ಬರುತ್ತಿದೆ. ದಿನನಿತ್ಯದ ಊಟಕ್ಕೆ ಗತಿಯಿಲ್ಲದ ಬಡತನದ ಪರಿಸ್ಥಿತಿ, ತಂದೆ-ತಾಯಿಗಳ ಅಕಾಲ ಮರಣ, ಅವಿವಾಹಿತ ಕನ್ನೆಯರು ಮಕ್ಕಳಿಗೆ ಜನನ ನೀಡಿದಾಗ, ಪೋಷಕರಿಗೆ ಮಕ್ಕಳು ಬೇಡವಾದಾಗ, ಕೌಟುಂಬಿಕ ವಿಘಟನೆ, ಮಲತಾಯಿಯ ಕಿರುಕುಳ ತಾಳಲಾರದೆ, ತಿಳಿಯದೆ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅಪರಾಧ ಮಾಡಿ, ಪಟ್ಟಣದ ಥಳುಕು ಜೀವನಕ್ಕೆ ಮರುಳಾಗಿ ಮನೆ ಬಿಟ್ಟುಬಂದವರು, ಸಮಾಜ ಘಾತುಕ ವ್ಯಕ್ತಿಗಳಿಂದ ಅಪಹರಣಕ್ಕೆ ಒಳಗಾದವರು, ಅಸಮರ್ಪಕ ಸಾಮಾಜೀಕರಣ - ಇವೇ ಮುಂತಾದ ಕಾರಣಗಳಿಂದ ಬೀದಿ ಮಕ್ಕಳ ಸಂಖ್ಯೆ ಭಾರತದಲ್ಲಿ ದಿನೇ ದಿನೇ ಏರುತ್ತಾ ಹೋಗುತ್ತಿದೆ. ಅಲ್ಲದೆ, ಜನಸಂಖ್ಯೆಗೆ ಅನುಗುಣವಾಗಿ ಬೆಳೆಯಲಾಗದ ಸಂಪನ್ಮೂಲಗಳು ಮುಂತಾದವುಗಳು ಆಶ್ರಯಿತ ಮಕ್ಕಳ ಹೆಚ್ಚಳಕ್ಕೆ ಕಾರಣವಾಗಿವೆ.

ಜನಸಂಖ್ಯಾ ಬೆಳವಣಿಗೆ ಮತ್ತು ಬಡತನ ಇವೆರಡು ನಮ್ಮ ಸಮಾಜದಲ್ಲಿ ಪರಸ್ಪರ ಪೂರಕವಾಗಿರುವ ಸಮಸ್ಯೆಗಳು. ನಗರದಲ್ಲಿ ಹೆಚ್ಚು ಜನರನ್ನು ಹೊಂದಿರುವ ಕುಟುಂಬಗಳಲ್ಲಿ ಬಡತನದಿಂದಾಗಿ ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿಯು ಅಸಮರ್ಥರಾಗಿರುತ್ತಾರೆ. ಇಂಥ ಕುಟುಂಬಗಳಲ್ಲಿ ಹೆಚ್ಚಿನದಾಗಿ ಹೆಣ್ಣು ಮಕ್ಕಳ ಜೀವನಾವಕಾಶಗಳು ಅಸಮತೋಲನದಿಂದ ಕೂಡಿರುತ್ತವೆ. ಕನಿಷ್ಠ ಅವಶ್ಯಕತೆಗಳಾದ, ಆಹಾರ, ಶಿಕ್ಷಣ ಮತ್ತು ಆರೋಗ್ಯ ರಕ್ಷಣೆ ಮುಂತಾದವುಗಳನ್ನು ಪಡೆದುಕೊಳ್ಳಲು ಅಸಾಧ್ಯವಾಗಿದ್ದು ದೈಹಿಕ ಮತ್ತು ಮಾನಸಿಕ ಶೋಷಣೆಗೆ ಒಳಪಟ್ಟಿರುತ್ತಾರೆ. ಇಂಥ ಎಷ್ಟೋ ಕುಟುಂಬಗಳಲ್ಲಿ ಮಕ್ಕಳೇ ಬೇಡವಾದ ಪರಿಸ್ಥಿತಿ ಒದಗಿಬಂದಿರುತ್ತದೆ. ಈ ಪರಿಸ್ಥಿತಿಗಳಿಂದ ಮುಕ್ತಿಯನ್ನು ಪಡೆಯಲು ಕೆಲವೊಂದು ಹೆಣ್ಣುಮಕ್ಕಳು ಮನೆ ಬಿಟ್ಟು ಓಡಿಬಂದು ನಗರದ "ಬೀದಿ"ಗಳಲ್ಲಿ ಬಸ್‌ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆ ಪ್ರದೇಶ ಮುಂತಾದ ಕಡೆಗಳಲ್ಲಿ ಆಶ್ರಯ ಪಡೆದುಕೊಳ್ಳುತ್ತಾರೆ.

ಭಾರತದಲ್ಲಿ ಕೆಲವೊಂದು ಸಾಂಸ್ಕೃತಿಕ ನಿಯಮಗಳು ಹೆಣ್ಣುಮಕ್ಕಳಿಗೆ ಸಂಬಂಧಿಸಿದಂತೆ ಕೆಲವೊಂದು ನಿರ್ಬಂಧಗಳನ್ನು ವಿಧಿಸಿದೆ. ಇದನ್ನು ಅನೇಕ ಕುಟುಂಬಗಳಲ್ಲಿ ಇಂದಿಗೂ

ಅತಿ ಶ್ರದ್ಧೆಯಿಂದ ಪಾಲಿಸಿಕೊಂಡು ಬರಲಾಗುತ್ತಿದೆ. ಇವುಗಳು ಹೆಣ್ಣುಮಕ್ಕಳ ಮುಕ್ತ ಆಲೋಚನೆಗೆ ಅವಕಾಶವನ್ನು ನೀಡಿಲ್ಲ. ಇದರಿಂದ ಕೆಲವೊಂದು ಪ್ರಾಪ್ತ ಹೆಣ್ಣುಮಕ್ಕಳು ಮನೆಯನ್ನು ತೊರೆದು ನಗರಗಳ ಕಡೆ ಓಡಿ ಬರುತ್ತಿದ್ದಾರೆ. ಇವರು ಬೀದಿಗಳಲ್ಲೇ ವಾಸಿಸುತ್ತಾ ತಮ್ಮ ಹೆಚ್ಚಿನ ಸಮಯವನ್ನು ಬೀದಿಯಲ್ಲೇ ಕಳೆಯುತ್ತಿದ್ದಾರೆ. ಈ ರೀತಿಯ ಮನೆ ಬಿಟ್ಟು ಓಡಿ ಬಂದ ಹೆಣ್ಣುಮಕ್ಕಳ ಸಂಖ್ಯೆಯು ದಿನೇ ದಿನೇ ಅಧಿಕವಾಗಿ ನಗರಗಳಲ್ಲಿ ಬೆಳೆಯಲಾರಂಭಿಸಿದೆ.

ಯಾವುದೋ ಕಾರಣಗಳಿಗಾಗಿ ನಗರಗಳ ಕಡೆ ವಲಸೆ ಬರುವ ಜನರು ರಸ್ತೆಯ ಪಕ್ಕಗಳಲ್ಲಿಯೇ ಕೊಳೆಗೇರಿಗಳಲ್ಲಿಯೋ ಕಲ್ಲು, ಮಣ್ಣು, ಪ್ಲಾಸ್ಟಿಕ್ ಹಾಳೆ ಮುಂತಾದವುಗಳಿಂದ ಮನೆಗಳನ್ನು ನಿರ್ಮಿಸಿ ಆಶ್ರಯವನ್ನು ಪಡೆದಿರುತ್ತಾರೆ. ಈ ಮನೆಗಳಲ್ಲಿ ವಾಸಿಸುವ ಜನರು ಕಡು ಬಡವರಾಗಿದ್ದು ಬೆಲೆ ಹೆಚ್ಚಳದಿಂದಾಗಿ ಅವಶ್ಯಕ ವಸ್ತುಗಳನ್ನು ಪಡೆಯಲು ಅಸಾಧ್ಯವಾಗಿದೆ. ಆದಾಯವನ್ನು ಹೆಚ್ಚಿಸಿಕೊಳ್ಳಲು ಮಹಿಳೆ ಮತ್ತು ಮಕ್ಕಳ ದುಡಿತವನ್ನು ಅವಲಂಬಿಸಿದ್ದಾರೆ. ಮಹಿಳೆಯರು ಸಣ್ಣ ಪುಟ್ಟ ಕಾರ್ಖಾನೆ, ಬೀಡಿ ಮಾಡುವುದು, ಗಂಧದಕಡ್ಡಿ ಮಾಡುವುದು ಮುಂತಾದ ಕೆಲಸಗಳಲ್ಲಿ ನಿಯೋಜನೆಗೊಂಡರೆ ಹೆಣ್ಣುಮಕ್ಕಳು ಬೀದಿಯಲ್ಲಿ ಸಿಗುವ ಸೌದೆ, ಇದ್ದಿಲು ಮುಂತಾದವುಗಳನ್ನು ಎತ್ತಿ ತಂದು ಅಡುಗೆಯನ್ನು ಬೇಯಿಸುತ್ತಾರೆ. ಮತ್ತೆ ಕೆಲವು ಹೆಣ್ಣು ಮಕ್ಕಳು ಆಹಾರವನ್ನೇ ಮನೆಯಿಂದ ಮನೆಗೆ ಹೋಗಿ ಬೇಡಿ ತರುತ್ತಾರೆ. ಮುಂಬೈ ನಗರದ ಒಂದು ರಸ್ತೆಯ ಪಕ್ಕದಲ್ಲಿ ವಾಸಿಸುವ 12 ವರ್ಷದ ಬಾಲಕಿ ಸೈತ್ರಾಲೊಂಡೆ ಶಾಲೆಯ ಮೆಟ್ಟಿಲನ್ನೇ ತುಳಿದಿಲ್ಲ. ಕೆಲವು ದಿನಗಳ ಹಿಂದಷ್ಟೇ ತನ್ನ ತಂದೆಯನ್ನು ಕಳೆದುಕೊಂಡಿದ್ದಾಳೆ. ತನ್ನ ತಾಯಿ ಮನೆಯಲ್ಲಿ ಗಂಧದ ಕಡ್ಡಿಯ ಕೆಲಸವನ್ನು ಮಾಡಿದರೆ, "ನಾನು ನಮ್ಮ ಮನೆಯ ಅಥವಾ ಗುಡಿಸಲಿನ ಸುತ್ತಮುತ್ತಲಿನ ಮನೆಗಳಲ್ಲಿ ಭಿಕ್ಷೆ ಬೇಡಿ ತರುತ್ತೇನೆ ಆನಂತರ ನಾನು ಮತ್ತು ತನ್ನ ತಾಯಿ ಜೊತೆ ಸೇರಿ ಊಟ ಮಾಡುತ್ತೇವೆ" ಎಂದು ಹೇಳುತ್ತಾಳೆ. ಹೀಗೆ ಕೆಲವು ಹೆಣ್ಣುಮಕ್ಕಳು ತಮ್ಮ ಕುಟುಂಬದ ಆದಾಯಕ್ಕೆ ಕೊಡುಗೆಯನ್ನು ನೀಡುತ್ತಾರೆ.

ಗ್ರಾಮೀಣ ಪ್ರದೇಶದಲ್ಲಿ ತೀರ ಬಡತನದ ಸ್ಥಿತಿಯಲ್ಲಿ ಬದುಕುತ್ತಿರುವ ಕುಟುಂಬಗಳ ಹೆಣ್ಣುಮಕ್ಕಳಿಗೆ ಕೆಲವೊಂದು ದಲ್ಲಾಳಿಗಳು ಬಣ್ಣ ಬಣ್ಣದ ಉದ್ಯೋಗದ ಆಸೆ ತೋರಿಸಿ ಮರುಳು ಮಾಡಿ ತಿಳಿಯದ ಹೆಣ್ಣುಮಕ್ಕಳನ್ನು ನಗರಗಳಿಗೆ ಕರೆತಂದು ತಮ್ಮ ಸ್ವಾರ್ಥ ಚಟುವಟಿಕೆಗಳಿಗೆ ಬಳಸಿಕೊಂಡು ಆನಂತರ ಹಣ ಪಡೆದು ವೇಶ್ಯಾಗೃಹಗಳಿಗೂ ತಳ್ಳಲ್ಪಡುವ ಸಾಧ್ಯತೆಗಳಿರುತ್ತವೆ. ಹೋಟೆಲ್, ಸಣ್ಣಪುಟ್ಟ ಅಂಗಡಿಗಳಲ್ಲಿ ಸೇವಕಿಯರಾಗಿ ಕೆಲಸ ಪಡೆದವರು ಕೆಲವು ಸಂದರ್ಭಗಳಲ್ಲಿ ಲೈಂಗಿಕ ಶೋಷಣೆಗೆ ಒಳಗಾಗಿ ದೂರದಲ್ಲಿರುವ ತಮ್ಮ ಪೋಷಕರ ಬಳಿಗೆ ತೆರಳಲಾರದೆ ಬೀದಿಯಲ್ಲೇ ಉಳಿದುಕೊಂಡು ಮಾರುಕಟ್ಟೆಯ ಅಕ್ಕ-ಪಕ್ಕಗಳಲ್ಲಿ ಕೊಳೆತ ತರಕಾರಿ ಹಣ್ಣು ಹಂಪಲುಗಳನ್ನು ಎತ್ತುತಂದು. ಅಲ್ಪಸ್ವಲ್ಪ ಹಣವನ್ನು ಸಂಪಾದಿಸುತ್ತಾ ನಿಕೃಷ್ಟವಾದ ಜೀವನವನ್ನು ಕಳೆಯುತ್ತಿರುತ್ತಾರೆ.

ಸಾಮಾನ್ಯವಾಗಿ ಬೀದಿಮಕ್ಕಳು ಒಂಟಿಯಾಗಿ ವಾಸಿಸುವುದು ತುಂಬಾ ವಿರಳ. ಆದರೆ ಹೆಣ್ಣು ಮತ್ತು ಗಂಡುಮಕ್ಕಳು ಜೊತೆ ಜೊತೆಯಲ್ಲೇ ವಾಸಿಸುವುದು ಕೂಡ ನಗರದ ಬೀದಿಗಳಲ್ಲಿ ಕಂಡುಬರುತ್ತದೆ. ಇವರೆಲ್ಲರು ಅನೇಕ ಕಾರಣಗಳಿಂದ ಮನೆಯನ್ನು ತೊರೆದು ಇಲ್ಲಿ ಆಶ್ರಯ ಪಡೆದಿರುತ್ತಾರೆ. ಶೀಲಾ ಮತ್ತು ಶೈಲಾ ಎಂಬ ಇಬ್ಬರು ಸಹೋದರಿಯರು ಬಡತನದಿಂದ ಮನೆಬಿಟ್ಟು ರಾಮನಗರ ದಿಂದ ಓಡಿಬಂದಿದ್ದಾರೆ. ಈಗ ಅವರು ಮೈಸೂರು ನಗರದ ಮೃಗಾಲಯದ ಹತ್ತಿರ ಇರುವ ಗಂಡುಮಕ್ಕಳ ಜೊತೆಯಲ್ಲಿ ವಾಸಿಸುತ್ತಿದ್ದಾರೆ.

ಬೀದಿಯಲ್ಲಿ ಇಷ್ಟೇ ಬೀದಿ ಹೆಣ್ಣುಮಕ್ಕಳು ವಾಸಿಸುತ್ತಿದ್ದಾರೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಮುಂಬೈನಗರದಲ್ಲಿ 2,000 ದಿಂದ 30,000 ಬೀದಿ ಹೆಣ್ಣುಮಕ್ಕಳಿದ್ದಾರೆ ಎಂದು ಒಂದು ಸ್ವಯಂ ಸೇವಾ ಸಂಸ್ಥೆ ವರದಿಮಾಡಿದೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಬೀದಿಯಲ್ಲಿದ್ದು ರಾತ್ರಿ ಮನೆಗೆ ತೆರಳುವ ಮಕ್ಕಳು ತಮ್ಮ ಪೋಷಕರನ್ನು ಹೊಂದಿರುತ್ತಾರೆ. ಇವರು ಬೀದಿಯ ಮೇಲಿನ ಮಕ್ಕಳು, ಇವರಿಗೆ ಬೀದಿಯೇ ತಮ್ಮ ವಾಸದ ಮನೆಯಾಗಿರುತ್ತದೆ, ಬೇರೆ ಕಡೆ ಪೋಷಕರಿದ್ದು ಸಾಂಪ್ರದಾಯಿಕ ಸಂಬಂಧ ಹೊಂದಿರುವ ಬೀದಿಯ ಮಕ್ಕಳು, ಸಂಪೂರ್ಣ ವಾಗಿ ಪೋಷಕರಿಂದ ವಂಚಿತರಾದ ಪರಿತ್ಯಕ್ತ ಮಕ್ಕಳು - ಹೀಗೆ ಯುನಿಸೆಫ್ ಬೀದಿಯಲ್ಲಿ ಕಂಡುಬರುವ ಮಕ್ಕಳನ್ನು ವಿಭಾಗಿಸುತ್ತದೆ.

ಕೆಲವು ದಲ್ಲಾಳಿಗಳು, ಕಳ್ಳರು, ಅಥವಾ ಸಮಾಜ ಘಾತುಕರು, ಬೇರೆ ಬೇರೆ ಪ್ರದೇಶಗಳಿಂದ ಹೆಣ್ಣುಮಕ್ಕಳನ್ನು ಅಪಹರಣ ಮಾಡಿ ನಗರಗಳಿಗೆ ಕರೆತಂದು, ಸಮಾಜ ಬಾಹಿರ ಚಟುವಟಿಕೆಗಳಲ್ಲಿ ತೊಡಗಿಸುತ್ತಾರೆ. 5 ರಿಂದ 12 ವರ್ಷಗಳ ಮಕ್ಕಳನ್ನು ನಗರದ ಜನಸಂದಣಿ ಇರುವ ಕಡೆಗಳಲ್ಲಿ ಜೇಬುಗಳ್ಳತನಕ್ಕೆ ನಿಯೋಜಿಸಲಾಗುತ್ತದೆ. ಇಂಥಹ ಹಲವಾರು

ಉದಾಹರಣೆಗಳು ಕಂಡುಬರುತ್ತವೆ. ಒಂದು ದಿನ 12 ವರ್ಷದ ಸರಸ್ವತಿ ಮತ್ತು 10 ವರ್ಷದ ಲೀಲಾವತಿ ಮೈಸೂರು ನಗರ ಬಸ್ ನಿಲ್ದಾಣದ ಬಳಿ ಕಿಸೆಗಳ್ಳತನ ಮಾಡುತ್ತಿದ್ದಾಗ ಸಾರ್ವಜನಿಕರೇ ಅವನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದರು. ಪೋಲೀಸರು ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಇಬ್ಬರು ಅಪರಿಚಿತ ವ್ಯಕ್ತಿಗಳು ಈ ಮಕ್ಕಳನ್ನು ಅಪಹರಿಸಿ ತಂದು ಬಲವಂತವಾಗಿ ಈ ದಂದೆಯಲ್ಲಿ ತೊಡಗಿಸಿದುದು ಬೆಳಕಿಗೆ ಬಂದಿತು. ಆ ಕೃತ್ಯಕ್ಕೆ ಇಳಿಯಲು ಒಪ್ಪದ ಮಕ್ಕಳ ಕೈ, ಕಾಲುಗಳ ಮೇಲೆ ಉರಿಯುತ್ತಿದ್ದ ಸಿಗರೇಟಿನಿಂದ ಸುಟ್ಟಿರುವುದಲ್ಲದೆ, ಬಾಸುಂಡೆ ಬರುವಂತೆ ಮಕ್ಕಳಿಗೆ ಹೊಡೆದಿದ್ದರೆನ್ನಲಾಗಿದೆ.

12 ವರ್ಷದ ಲಕ್ಷ್ಮೀ ಮೈಸೂರಿನ ಕೆ.ಆರ್. ಮಾರುಕಟ್ಟೆಯ ಸಮೀಪ ರಸ್ತೆಯ ಪಕ್ಕದಲ್ಲಿ ವಾಸಿಸುತ್ತಿದ್ದಾಳೆ. ಆಕೆ ಶಾಲೆಯಲ್ಲಿ ಕಲಿತಿಲ್ಲ. ತಂದೆಯನ್ನು ಕಳೆದುಕೊಂಡಿದ್ದಾಳೆ. ಆಕೆಯ ತಾಯಿ ದೇವಸ್ಥಾನದ ಮತ್ತು ಮಸೀದಿಗಳ ಬಳಿ ಭಿಕ್ಷೆ ಬೇಡಿದರೆ, ಆಕೆ ಟ್ರಾಫಿಕ್ ಸಿಗ್ನಲ್ಸ್ ಬಳಿ ಬಂದು ನಿಲ್ಲುವ ವಾಹನ ಮತ್ತು ಪಾದಚಾರಿಗಳ ಹತ್ತಿರ ಭಿಕ್ಷೆ ಬೇಡುತ್ತಾಳೆ. ಆರು ವರ್ಷದ ಸುಮಾ, ಐದು ಮಂದಿ ಸಹೋದರಿಯರು ಮತ್ತು ಇಬ್ಬರು ಸಹೋದರರನ್ನು ಪಡೆದಿದ್ದು ಆಕೆಯ ತಾಯಿ ಮಾದಕ ವಸ್ತುಗಳ ಚಟಕ್ಕೆ ಬಲಿಯಾಗಿದ್ದಾಳೆ. ಆಕೆ ಕೂಡ ಭಿಕ್ಷೆಯನ್ನು ಬೇಡುತ್ತಿದ್ದಾಳೆ.

12 ರಿಂದ 15ರ ವಯೋಮಾನದ ಹೆಣ್ಣುಮಕ್ಕಳು ಬೆನ್ನ ಹಿಂದೆ ಚೀಲವನ್ನು ಹೊತ್ತು ಬೀದಿಯಲ್ಲಿ ಚಿಂದಿ ಎತ್ತುವ ಸೈನಿಕರೋಪಾದಿಯಲ್ಲಿ ಕಂಡುಬರುತ್ತಾರೆ. ಈ ಗುಂಪಿಗೆ ಸೇರುವ ಬೀದಿ ಹೆಣ್ಣುಮಕ್ಕಳು ವಾಸದ ಮನೆಯನ್ನು ಹೊಂದಿದ್ದು ತಂದೆ-ತಾಯಿಗಳ ಜೊತೆಯಲ್ಲಿ ವಾಸಿಸುತ್ತಾ ಒಂಟಿಯಾಗಿ ಇಲ್ಲವೇ ತಮ್ಮ ತಂದೆ ತಾಯಿಗಳ ಜೊತೆಯಲ್ಲೇ ಬೀದಿಯ ಅಕ್ಕ-ಪಕ್ಕಗಳಲ್ಲಿ ಕೊಳೆತು ನಾರುವ ಕಸದ ರಾಶಿಯ ಮಧ್ಯ ಏನಾದರೂ ಸಿಕ್ಕೀತೋ ಎಂದು ಹುಡುಕುತ್ತಿರುವ ದೃಶ್ಯಗಳು ನಗರಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ. ಈ ಮಕ್ಕಳು ಮುಂಜಾನೆಯಲ್ಲೇ ತಮ್ಮ ಮನೆಯನ್ನು ಬಿಟ್ಟು ಬೀದಿಯಲ್ಲಿ ಸಿಗುವ ಚಿಂದಿ, ಇತ್ಯಾದಿ ಪದಾರ್ಥಗಳನ್ನು ಎತ್ತಿ ನಂತರ ಮಾರಾಟ ಮಾಡಿ ಹಣ ಪಡೆದು ಸಂಜೆಯ ವೇಳೆಗೆ ಮನೆ ಸೇರುತ್ತಾರೆ. ಇವರಲ್ಲಿ ಕೆಲವರು ಮಾತ್ರ ತಮ್ಮ ಮಧ್ಯಾಹ್ನದ ಊಟಕ್ಕಾಗಿ ಮನೆಗೆ ತೆರಳಿದರೆ ಮತ್ತೆ ಕೆಲವರು ಬೀದಿಯಲ್ಲೇ ಚಿಕ್ಕಪುಟ್ಟ ಹೋಟೆಲ್‌ಗಳಲ್ಲಿ ಅಥವಾ ಕಲ್ಯಾಣ ಮಂಟಪಗಳು ಅಥವಾ ಇತರೆ ಯಾವುದೇ ಸಮಾರಂಭಗಳು ನಡೆದಾಗ ಇಲ್ಲಿ ಹೊರ ಚೆಲ್ಲಿದ ಆಹಾರವನ್ನು ತಿಂದು ತಮ್ಮ ಹಸಿವನ್ನು ಪೂರೈಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಈ ಮಕ್ಕಳು ದಿನದ ಹೆಚ್ಚಿನ ಸಮಯವನ್ನು ಬೀದಿಯಲ್ಲೇ ಕಳೆಯುತ್ತಾರೆ.

ಬೀದಿಮಕ್ಕಳ ಸಮಸ್ಯೆಯು ಕೇವಲ ನಗರ ಪ್ರದೇಶಗಳಲ್ಲಿ ಮಾತ್ರ ಕಂಡುಬರುವಂತದಾಗಿದ್ದು, ಭಿಕ್ಷೆ ಬೇಡುವವರಾಗಿ, ಚಿಂದಿ ಎತ್ತುವವರಾಗಿ, ಸಣ್ಣಪುಟ್ಟ ವ್ಯಾಪಾರಗಾರರಾಗಿ ಬೇರೆ ಬೇರೆ ರೂಪಗಳಲ್ಲಿ ಕಂಡುಬರುವ ಈ ಬೀದಿ ಮಕ್ಕಳಲ್ಲಿ ಮಾದಕ ವಸ್ತುಗಳ ಸೇವನೆಯು ಅವರ ಜೀವನದ ಒಂದು ಭಾಗವಾಗಿ ಕಂಡುಬರುತ್ತದೆ. ಗಂಡುಮಕ್ಕಳು, ಹೆಣ್ಣುಮಕ್ಕಳಾದಿಯಾಗಿ ಈ ಮಾದಕವಸ್ತುಗಳ ಚಟಕ್ಕೆ ಬಲಿಯಾಗಿರುವುದು ಸಮಾಜಕ್ಕೆ ದಿಗಿಲು ಹುಟ್ಟಿಸುವಂತ ವಿಷಯವಾಗಿದೆ. ತಾವು ಪ್ರತಿದಿನ ಗಳಿಸಿದ ಆದಾಯದ ಅರ್ಧದಿಂದ ಮುಕ್ಕಾಲು ಭಾಗ ಹಣವನ್ನು, ಮಾದಕವಸ್ತುಗಳನ್ನು ಪಡೆಯಲು ವ್ಯಯ ಮಾಡುತ್ತಾರೆ. ಮಾದರವಸ್ತುಗಳ ಚಟಕ್ಕೆ ಬಲಿಯಾಗಿ ಮನೆತೊರೆದು ಬಂದವರು ಕೂಡ ಬೀದಿಯಲ್ಲಿ ಆಶ್ರಯ ಪಡೆದಿದ್ದಾರೆ. ನೈಲ್‌ಪಾಲೀಷ್, ಗಂಮ್, ವೈಟ್‌ಫ್ಲ್ಯುಯಿಡ್, ಸೆಲ್ಯೂಷನ್ ಮುಂತಾದ ಮುಕ್ತ ಮಾರುಕಟ್ಟೆಯಲ್ಲಿ ದೊರೆಯುವ ವಸ್ತುಗಳನ್ನು ಮಾದಕ ವಸ್ತುಗಳಾಗಿ ಬಳಸುವುದು ಕಂಡುಬರುತ್ತದೆ.

## REFERENCES


1. "A situational Analysis of street Children in the City of Bangalore, the concerned for working children, Bangalore (Unpublished survey report)."
2. "Girl child in India" Leelamma Devasaia, V.V. Devasia, Ashish publishing House 8/81, Punjabi Ragh, New Delhi-110 026
3. The Begger child : For a few coins a day" Sharmila Joshi.
4. The Times of India, April 23, 1998

# ಹಿಮಾಚಲ ಪ್ರದೇಶ ಮತ್ತು ಹರಿಯಾಣದಲ್ಲಿ ಲಿಂಗ ಸಂಬಂಧಗಳು ಮತ್ತು ಶಿಕ್ಷಣ

○ ವೆಂ. ವನಜ

**ಹಿ**ಮಾಚಲ ಪ್ರದೇಶ ಮತ್ತು ಹರಿಯಾಣದ ರಾಜ್ಯಗಳ ಆರ್ಥಿಕ ಪರಿಸ್ಥಿತಿಗಳು ಹೆಚ್ಚು ಕಡಿಮೆ ಒಂದೇ ರೀತಿಯವಾದರೂ ಅಲ್ಲಿನ ಲಿಂಗ ಸಂಬಂಧಗಳಲ್ಲಿ ಬಹಳಷ್ಟು ವ್ಯತ್ಯಾಸಗಳು ಕಂಡು ಬರುತ್ತವೆ. ಹೆಣ್ಣುಮಕ್ಕಳ ಶಿಕ್ಷಣದ ಮೇಲೆ ಯಾವ ರೀತಿಯ ಪ್ರಭಾವವನ್ನು ಬೀರಿವೆಯೆಂದು ತಿಳಿಯುವ ಉದ್ದೇಶದಿಂದ ಹರಿಯಾಣದ ಮಹೇಂದ್ರನಗರ ಜಿಲ್ಲೆ ಮತ್ತು ಹಿಮಾಚಲ ಪ್ರದೇಶದ ಸೋಲನ್ ಮತ್ತು ಸಿರ್‌ಮೋರ್ ಜಿಲ್ಲೆಗಳಲ್ಲಿ ತಲಾ 38 ಮಂದಿ ತಾಯಂದಿರನ್ನು ಸಂದರ್ಶಿಸಿದಾಗ ಕಂಡುಬಂದ ಕೆಲವು ಅಂಶಗಳು ಹೀಗಿವೆ :

- ಈ ಎರಡೂ ರಾಜ್ಯಗಳಲ್ಲಿ ಸಂದರ್ಶಿಸಲ್ಪಟ್ಟ ತಾಯಂದಿರು ತಮ್ಮ ಹೆಣ್ಣುಮಕ್ಕಳಿಗೆ ಶಿಕ್ಷಣ ಅತ್ಯವಶ್ಯ ಎಂಬ ಅಭಿಪ್ರಾಯ ಹೊಂದಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬಂದ ಪ್ರೇರಕ ಅಂಶವೆಂದರೆ, ಶಿಕ್ಷಣ ಪಡೆದ ಹೆಣ್ಣುಮಕ್ಕಳು ಒಳ್ಳೆಯ ಉದ್ಯೋಗವನ್ನು ಪಡೆಯುವ ಸಾಧ್ಯತೆ ಹೊಂದಿರುತ್ತಾರೆನ್ನುವುದು. ಹಿಮಾಚಲ ಪ್ರದೇಶದ 38 ಮಂದಿ ಮಹಿಳೆಯರಲ್ಲಿ 36 ಮಂದಿ, ತಮ್ಮ ಹೆಣ್ಣು ಮಕ್ಕಳು ವಿವಾಹದ ನಂತರ ಮನೆಯ ಹೊರಗೆ ದುಡಿಯಬೇಕೆಂದು ನಿರೀಕ್ಷಿಸಿದ್ದರು. ಈ ಎರಡೂ ರಾಜ್ಯಗಳಲ್ಲಿ ಶಿಕ್ಷಣ. ತನ್ನದೇ ಆದ ಮೌಲ್ಯವನ್ನು ಪಡೆದಿತ್ತು. ಶಿಕ್ಷಿತ ಮಹಿಳೆಯರು ಹೆಚ್ಚು ಸ್ವತಂತ್ರರೂ, ಹೆಚ್ಚಿನ ಆತ್ಮವಿಶ್ವಾಸವುಳ್ಳವರೂ, ಹಾಗೂ ಗ್ರಾಮದಿಂದ ಹೊರಗೆ ಓಡಾಡುವ ಸ್ವಾತಂತ್ರ್ಯವನ್ನು ಪಡೆದಿರುವವರಾಗಿರುತ್ತಾರೆಂದು ಭಾವಿಸಲಾಗಿತ್ತು. ಹರಿಯಾಣಧಲ್ಲಿ ಪ್ರತಿಕ್ರಿಯಿಸಿದ ಮಹಿಳೆಯರು ಮನೆಯ ಜವಾಬ್ದಾರಿಗಳನ್ನು ಮಾತ್ರ ನಿರ್ವಹಿಸುವವರಾಗಿದ್ದರು. ಇವರು ಮಹಿಳೆಯರು ಶಿಕ್ಷಿತರಾದಲ್ಲಿ ವಿವಾಹದ ಅವಕಾಶಗಳು ಉತ್ತಮವಾಗಿರುತ್ತವೆ. ಹಾಗೂ ಗೃಹನಿರ್ವಹಣೆಗೆ ಶಿಕ್ಷಣ ಸಹಾಯಕವಾಗುತ್ತದೆ ಎಂಬ ಅಭಿಪ್ರಾಯ ಹೊಂದಿದ್ದರು.
- ಹರಿಯಾಣದಲ್ಲಿ ಪ್ರತಿಕ್ರಿಯಿಸಿದ ಮೂವರು ಮಹಿಳೆಯರ ಮಕ್ಕಳು ಶಾಲೆಗೆ ಹೋಗಿರಲಿಲ್ಲ. ಹರಿಯಾಣಕ್ಕಿಂತ ಹಿಮಾಚಲ ಪ್ರದೇಶದಲ್ಲಿ ತಾಯಂದಿರ ಸಾಕ್ಷರತಾ ಮಟ್ಟಹೆಚ್ಚಾಗಿದೆ. ಆದರೆ ಈ ಮಹಿಳೆಯರು ತಾಯಂದಿರ ಸಾಕ್ಷರತೆ ಎರಡೂ ರಾಜ್ಯಗಳಲ್ಲಿ ಒಂದೇ ಮಟ್ಟದ್ದಾಗಿತ್ತು ಇದರರ್ಥ ಹಿಮಾಚಲ ಪ್ರದೇಶದಲ್ಲಿ ಶಾಲಾ ಶಿಕ್ಷಣದಲ್ಲಿ ವ್ಯವಸ್ಥೆ ಹೆಚು ತೀವ್ರಗತಿಯಲ್ಲಿ ವಿಸ್ತೃತಗೊಂಡಿದೆ ಎನ್ನಬಹುದಾಗಿದೆ. ಇಲ್ಲಿಯ ತಾಯಂದಿರು ಹರಿಯಾಣ ತಾಯಂದಿರಿಗಿಂತ ಶಿಕ್ಷಣದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಹೊಂದಿದರು. ಹಿಂದಿನ ವಾರದಲ್ಲಿ ಎಷ್ಟುದಿನ ಶಾಲೆ ನಡೆಯಿತು ಎಂಬ ಪ್ರಶ್ನೆಗೆ ಹರಿಯಾಣದ ಮಹಿಳೆಯರಲ್ಲಿ ಉತ್ತರವಿರಲಿಲ್ಲ.
- ಹಿಮಾಚಲ ಪ್ರದೇಶದಲ್ಲಿ ಮನೆ ಮತ್ತು ಶಾಲೆಗಿರುವ ಅಂತರ ಹೆಚ್ಚು. ಆದರೆ ಶಾಲೆಗಳಲ್ಲಿ ದೊರಕುವ ಸೌಲಭ್ಯಗಳಲ್ಲಿ ಹೆಚ್ಚು ವ್ಯತ್ಯಾಸವಿರಲಿಲ್ಲ. ಬೋಧನಾ ಮಟ್ಟದಲ್ಲಿ ವ್ಯತ್ಯಾಸ ಕಂಡುಬರುತ್ತಿತ್ತು. ಉದಾಹರಣೆಗೆ, ಶಾಲೆಗಳಲ್ಲಿ ಉಪಾಧ್ಯಾಯರು ಇಸ್ಪೀಟು ಆಟ ಆಡುತ್ತಲೋ ಅಥವಾ ಉಲ್ಲನ್ ಬಟ್ಟೆಗಳನ್ನು ಹೆಣೆಯುತ್ತಲೋ ಶಾಲಾವಧಿಯನ್ನು ಕಳೆಯುತ್ತಾರೆಂದು ಹರಿಯಾಣದ ಅನೇಕ ತಾಯಂದಿರು ದೂರಿದರು.
- ವಿವಾಹ ಪದ್ಧತಿಗಳು ಅನೇಕ ವಿಚಾರಗಳಲ್ಲಿ ಎರಡೂ ರಾಜ್ಯಗಳಲ್ಲಿ ಒಂದೇ ಆಗಿವೆ. ಉದಾಹರಣೆಗೆ, ವರದಕ್ಷಿಣೆ, ಹೆಣ್ಣು ಗಂಡನ ಮನೆಯಲ್ಲಿ ವಾಸ, ಮುಂತಾದವು. ಆದರೆ ಕೆಲವು ಪರಸ್ಪರ ವಿರುದ್ಧವಾದ ಪದ್ಧತಿಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಹರಿಯಾಣದ ಹೆಚ್ಚುಕಡಿಮೆ ಎಲ್ಲಾ ತಾಯಂದಿರು ಚಿಕ್ಕವಯಸ್ಸಿನ ದಂಪತಿಗಳು ಅವಿಭಜಿತ/ಜಂಟಿ ಕುಟುಂಬಗಳಲ್ಲಿ ವಾಸಿಸಬೇಕು ಎಂದರೆ, ಹಿಮಾಚಲ ಪ್ರದೇಶದಲ್ಲಿ ಅರ್ಧಕ್ಕಿಂತ ಕಡಿಮೆ ತಾಯಂದಿರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಅದೇ ರೀತಿ, ಹರಿಯಾಣದ 38 ಮಂದಿ ಮಹಿಳೆಯರಲ್ಲಿ 26 ಮಂದಿ ತಮ್ಮ ಹೆಣ್ಣುಮಕ್ಕಳು 21 ವರ್ಷ ವಯಸ್ಸಿನೊಳಗೆ ವಿವಾಹವಾಗಬೇಕೆಂದು ಬಯಸಿದರೆ, ಹಿಮಾಚಲ ಪ್ರದೇಶದ 9 ಮಂದಿ ಮಹಿಳೆಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಹೆಣ್ಣುಮಕ್ಕಳು ತಮಗಿಂತ ಕಡಿಮೆ ಓದಿದ ಹುಡುಗನನ್ನು ಮದುವೆಯಾಗುವುದು ಹರಿಯಾಣದಲ್ಲಿ ಊಹಿಸಲು ಸಾಧ್ಯವಾದ ವಿಷಯವಾಗಿದ್ದರೆ, ಹಿಮಾಚಲ ಪ್ರದೇಶದಲ್ಲಿ ಅದು ಒಪ್ಪಿತ ವಿಷಯವಾಗಿತ್ತು. ಅತ್ಯಂತ

ಹೆಚ್ಚು ಗಮನ ಸೆಳೆಯುವ ಅಂಶವೆಂದರೆ, ವಿವಾಹ ನಂತರದಲ್ಲಿ ತಂದೆ ತಾಯಂದಿರು ಮತ್ತು ಹೆಣ್ಣುಮಕ್ಕಳ ಸಂಬಂಧ ಕುರಿತದ್ದು. ಹಿಮಾಚಲ ಪ್ರದೇಶದಲ್ಲಿ ಎರಡು ವರ್ಷಗಳಲ್ಲಿ 13 ಮಂದಿ ತಾಯಂದಿರು ತಮ್ಮ ತಂದೆ ತಾಯಿಗಳನ್ನು ಹತ್ತು ಅಥವಾ ಅದಕ್ಕಿಂತ ಹೆಚ್ಚು ಬಾರಿ ಭೇಟಿ ಮಾಡಿದ್ದರೆ ಹರಿಯಾಣದಲ್ಲಿ ನಾಲ್ಕು ಮಂದಿ ತಾಯಂದಿರು ಮಾತ್ರ ಅಂಥವರಿದ್ದರು.

- ಹಿಮಾಚಲ ಪ್ರದೇಶದಲ್ಲಿ ತಾಯಂದಿರು ತಮ್ಮ ಕೌಟುಂಬಿಕ ವಿಚಾರಗಳಿಗೆ ಸಂಬಂಧಿಸಿದ ನಿರ್ಧಾರಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಇದು ಶಿಕ್ಷಣಕ್ಕೆ ಸಂಬಂಧಿಸಿದ ವಾಗಿರುತ್ತಿದ್ದವು. ಹರಿಯಾಣದಲ್ಲಿ ಏನೂ ತಿಳುವಳಿಕೆ ಇರಲಿಲ್ಲ. ಅದು ಪುರುಷರಿಗೆ ಸಂಬಂಧಿಸಿದ ವಿಚಾರ ಎಂದು ಭಾವಿಸಿದ್ದರು. ಅತ್ತೆ, ಮಾವಂದಿರು ಕೌಟುಂಬಿಕ ವಿಚಾರಗಳಲ್ಲಿ ಹೆಚ್ಚು ಅಧಿಕಾರವನ್ನು ಹೊಂದಿದ್ದರು. ಹಿಮಾಚಲ ಪ್ರದೇಶಗಳಲ್ಲಿ ಇದು ಅಷ್ಟಾಗಿ ಕಂಡುಬರಲಿಲ್ಲ.

ಹರಿಯಾಣದಲ್ಲಿ ಪುರುಷ ಪ್ರಧಾನ ಮೌಲ್ಯಗಳು ಮಹಿಳೆಯರ ದೃಷ್ಟಿಕೋನದ ಮೇಲೆ ಹಿಡಿತ ಸಾಧಿಸಿವೆ. ತಾಯಿಯೊಬ್ಬಳು ಹೆಣ್ಣುಮಕ್ಕಳ ವಿವಾಹ ವಯಸ್ಸಿನ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವಾಗಿ, 'ಹೆಣ್ಣುಮಕ್ಕಳು ಒಂದು ಹೊರೆ; ಅವರನ್ನು ಆದಷ್ಟು ಬೇಗ ಹೊರಹಾಕಿದಷ್ಟೂ ಒಳ್ಳೆಯದು ಎಂದು ಪ್ರತಿಕ್ರಿಯಿಸಿದಳು.

*ಆಧಾರ:* **ಮೇರಿ ಈವ್ ಬಾನ್‌ಡ್ರಾಯಿಟ್**

## ಲಿಂಗ ವ್ಯವಸ್ಥೆಗೆ ಸಂಬಂಧಿಸಿದ ಸೂಚಿಗಳು

### ಹಿಮಾಚಲ ಪ್ರದೇಶ, ಹರಿಯಾಣ ಮತ್ತು ಉತ್ತರ ಪ್ರದೇಶ

| | ಹಿಮಾಚಲ ಪ್ರದೇಶ | ಹರಿಯಾಣ | ಉತ್ತರ ಪ್ರದೇಶ |
|---|---|---|---|
| ಮಹಿಳೆ ಮತ್ತು ಪುರುಷರು ಪ್ರಮಾಣ, 1991 | 976 | 865 | 879 |
| ಮಹಿಳಾ ಜನಸಂಖ್ಯೆಗೆ ಮಹಿಳಾಕಾರ್ಮಿಕರ ಪ್ರಮಾಣ, 1991 (%) | 35 | 11 | 13 |
| ಗಂಡು ಶಿಶುಮರಣ ಪ್ರಮಾಣ ಹೆಣ್ಣುಶಿಶುಮರಣ ಪ್ರಮಾಣ, 1991(%) | 88.2 | 106.7 | 115.7 |
| ಶಾಲೆಯಿಂದ ಹೊರಗಿರುವ6-10ವಯೋಮಾನದ ಹೆಣ್ಣುಮಕ್ಕಳ ಪ್ರಮಾಣ, 1992-93 (%) | 11 | 22 | 50 |
| 15-19 ವಯೋಗುಂಪಿನ ಮಹಿಳೆಯರಲ್ಲಿ ವಿವಾಹಿತ ಮಹಿಳೆಯರ ಪ್ರಮಾಣ, 1991 (%) | 18 | 29 | 32 |
| ಒಟ್ಟು ಫಲವತ್ತತೆಯ ದರ, 1991 ಹೆರಿಗೆ ಪೂರ್ವ ಪರೀಕ್ಷೆಗೊಳಪಟ್ಟ | 3.1 | 4.0 | 5.1 |
| ಜನನ ಪ್ರಮಾಣ 1992-93 (%) | 74 | 67 | 30 |

*ಆಧಾರ : 1991ರ ಜನಗಣತಿಯಿಂದ ಸಂಗ್ರಹ; ನ್ಯಾಷನಲ್ ಫ್ಯಾಮಿಲಿ ಹೆಲ್ತ್ ಸರ್ವೇ 1992-93 : ಡ್ರೆಜ್ ಮತ್ತು ಸೇನ್ (1995): ಸ್ಟ್ಯಾಟಿಸ್ಟಿಕಲ್ ಅಪೆಂಡಿಕ್ಸ್:, ಸ್ಯಾಂಪಲ್ ರಿಜಿಸ್ಟ್ರೇಷನ್ ಸಿಸ್ಟಮ್ 1991.*

# ಮುಸ್ಲಿಂ ಪರ್ಸನಲ್ ಲಾನಲ್ಲಿ ಸುಧಾರಣೆಯ ಗಾಳಿ

*ಮಹಿಳೆಯೋರ್ವಳಿಗೆ ಗಂಡನಿಂದ ಹಿಂಸೆ*
*ಅಥವಾ ತ್ಯಜಿಸುವಿಕೆಯ ಬಗ್ಗೆ ಭೀತಿ ಇದ್ದಲ್ಲಿ,*
*ಅವರು ಜೊತೆಯಾಗಿರುವುದು ಪಾಪವಲ್ಲ,*
*ಅವರು ತಮ್ಮಿರ್ವರ ನಡುವೆ ಶಾಂತಿ ಒಪ್ಪಂದ*
*ಮಾಡಿಕೊಂಡಲ್ಲಿ*
*ಶಾಂತಿಯೇ ಉತ್ತಮ.*

*(ಹೋಲಿ ಖುರಾನ್, ಸುರಾ IV)*

**ಶಾಂ**ತಿ ಒಳ್ಳೆಯದು. ಆದರೆ 1985ರಲ್ಲಿ ಶಾಬಾನು ತನ್ನ 75 ವಯಸ್ಸಿನಲ್ಲಿ ಉನ್ನತ ನ್ಯಾಯಾಲದಲ್ಲಿ ತನ್ನ ಪತಿಯಿಂದ ಜೀವನಾಂಶ ಬೇಕು ಎಂದು ಮೊಕದ್ದಮೆ ಹೂಡಿ ಯುದ್ಧ ಮಾಡಿದಳು. ದೇಶ ವ್ಯಾಪಿ ಕೋಲಾಹಲ ಉಂಟುಮಾಡಿದ ಶಾಬಾನು ಪ್ರಕರಣ ಮುಸ್ಲಿಂ ಮಹಿಳಾ ಆ್ಯಕ್ಟ್-1986ರ ಉಗಮಕ್ಕೆ ನಾಂದಿಯಾಯಿತು.

ಅಲ್ಪ ಸಂಖ್ಯಾತ ಮಹಿಳೆಯರ ಸ್ಥಾನ ಮಾನದ ತನಿಖೆ ಮಾಡಲು ದೇಶದ ವಿವಿಧಡೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವು ವಿಚಾರಣೆ ನಡೆಸಿತು. ವಿಚಾರಣೆ ಪೂರ್ಣಗೊಂಡ ನಂತರ ಎಲ್ಲ ಮಹಿಳೆಯರು ಶಾಬಾನು ತರಹ ಯುದ್ಧ ಹೂಡಲು ಧೈರ್ಯಸಾಲದೆ ಮೌನವಾಗಿ ನೋವು ಅನುಭವಿಸುತ್ತಿರುವುದು ಗಮನೀಯವಾಗಿ ಕಂಡುಬಂದಿದೆ.

ಹೈದರಾಬಾದಿನ ನಜ್ಮಾ ಗಂಡ ತಾಫಿಕ್‌ನು ತನ್ನನ್ನು ನಾಲ್ಕು ಮಕ್ಕಳೊಂದಿಗೆ ತೊರೆದು ಬೇರೆ ಮದುವೆಯಾಗಿರುವ ಎಂದು ಹೇಳಿಕೆ ಕೊಟ್ಟಿರುವಳು. 3 ಗಂಡು ಮಕ್ಕಳಿರುವ 30 ವಯಸ್ಸಿನ ಮರ್‌ದಾನಾ ತನ್ನ ಗಂಡ ಸೈಯದ್ ಸಾದಿಖ್ ತನ್ನನ್ನುತೊರೆದು ಹೋದನೆಂದು ತಿಳಿಸಿದ್ದಾಳೆ. ಮುಂಬೈನಲ್ಲಿರಲೀ, ತೇಜ್‌ಪುರದಲ್ಲಿರಲೀ, ಇಂದೂರ್‌ನಲ್ಲಿರಲೀ ವಿಚಾರಣೆಯ ಸಮಯದಲ್ಲಿ ಹೇಳಿಕೆ ನೀಡಿರುವ ಎಲ್ಲ ಮಹಿಳೆಯರ ನೋವು, ಸಂಕಟ ಒಂದೇ ರೀತಿಯಾಗಿತ್ತು. ಅವರ ಹೆಸರುಗಳು ಬೇರೆ ಇತ್ತು ಅಷ್ಟೇ. ಮಕ್ಕಳನ್ನು ಕಟ್ಟಿಕೊಂಡು ದಿನನಿತ್ಯದ ಬದುಕು ಸಾಗಿಸಲು ಹೋರಾಟ ನಡೆಸುತ್ತಿರುವುದು ಸರ್ವೇಸಾಮಾನ್ಯವಾಗಿತ್ತು.

"ಧ್ವನಿಯಿಲ್ಲದವರ ಧ್ವನಿಗಳು" (Voice of the Voiceless), ವರದಿಯಲ್ಲಿ ಆಯೋಗವು, ಮುಸ್ಲಿಮ್ ಪಂಗಡ ಉನ್ನತ ಮಟ್ಟದ ಸಮಿತಿ 'ಆಲ್ ಇಂಡಿಯಾ ಮುಸ್ಲಿಂ ಪರ್‌ಸನಲ್ ಲಾ ಬೋರ್ಡ್‌ಗೆ', ಏಕ ರೀತಿಯ ಉತ್ನತ ಮಟ್ಟದ "ನಿಖಾನಾಮ"ವನ್ನು (ಮದುವೆಯ ಒಪ್ಪಂದ) ಎಲ್ಲ ಮುಸ್ಲಿಂ ಮದುವೆಗಳಲ್ಲಿ ಖಡ್ಡಾಯವಾಗಿ ಅನುಕರಿಸುವಂತೆ ಸೂಚಿಸಿ, ಹಲವಾರು ಸಲಹೆಗಳನ್ನು ನೀಡಿವೆ.

ಏಕ ರೀತಿಯ ಉನ್ನತ ಮಟ್ಟದ "ನಿಖಾನಾಮ" (ಮದುವೆಯ ಒಪ್ಪಂದ) ಹಲವು ರೀತಿಯಲ್ಲಿ ತ್ಯಜಿಸಲ್ಪಟ್ಟ ಮಹಿಳೆಗೆ ಸಹಾಯಕವಾಗಬಲ್ಲದು ಎಂದು ಆಯೋಗವು ತನ್ನ ವರದಿಯಲ್ಲಿ ಸ್ಪಷ್ಟ ಪಡಿಸಿದೆ.

"ನಿಖಾನಾಮ", (ಮದುವೆಯ ಒಪ್ಪಂದಗಳ ಅನೇಕ ವಿವರಗಳನ್ನು ಒಳಗೊಂಡ ಒಂದು ದಾಖಲೆ ಪತ್ರ). ವಿವಾದದ ಸಮಯದಲ್ಲಿ ಅದರ ಉಪಯೋಗ ಪಡೆಯಬಹುದಾಗಿದೆ. ಪ್ರಸ್ತುತದಲ್ಲಿ ಏಕರೀತಿಯ ಉನ್ನತ ಮಟ್ಟದ ನಿಖಾನಾಮ ಇಲ್ಲದಿರುವುದರಿಂದ ಹಾಗೂ ಅದರಲ್ಲಿ ಇರುವ ವಿವರಗಳು ಕೇವಲ ರೂಪ ರೇಖೆಗಳಾಗಿರುವುದರಿಂದ ವಿವಾದದ ಸಮಯದಲ್ಲಿ ಅದನ್ನು ಜಾರಿಗೊಳಿಸಲು ಕಷ್ಟವಾಗುತ್ತದೆ. ವಿಪರ್ಯಾಸವೆಂದರೆ 'ನಿಖಾನಾಮೆ' ದಾಖಲೆ ಪತ್ರವು ಮಹಿಳೆಯರ ಅಧೀನದಲ್ಲಿ ಇರುವುದೇ ಇಲ್ಲ.

---

**ಇತರ ಇಸ್ಲಾಮಿಕ್ ದೇಶಗಳಲ್ಲಿ ಮಹಿಳಾ ಹಕ್ಕುಗಳ ಸುಧಾರಣೆ**

*ಮಹಿಳಾ ಹಕ್ಕುಗಳಿಗೆ ರಕ್ಷಣೆ ನೀಡುವಲ್ಲಿ ಇತರ ಇಸ್ಲಾಮಿಕ್ ದೇಶಗಳು ಮುಂದುವರೆದ ಲಕ್ಷಣ ಕಾಣುತ್ತೇವೆ.*

*ಟರ್ಕಿಯು ಪ್ರಾಚೀನ ಮುಸ್ಲಿಮ್ ಕಾನೂನು ಬದಲಾಯಿಸಿ ನೂತನ ಮಾದರಿಯ "ಸಿವಿಲ್ ಕೋಡ್"ನ್ನು ಬಳಕೆಗೆ ತಂದಿದೆ. ಪಾಕಿಸ್ತಾನದಲ್ಲಿ ಬಹುಪತ್ನಿತ್ವವನ್ನು ಕಾನೂನು ಅಡಿಯಲ್ಲಿ ತಂದಿದೆ. ಎಲ್ಲ ಮದುವೆಯು ನೊಂದಾಯಿಸಲ್ಪಡುತ್ತದೆ. ಕೇವಲ ತಲಾಖ್ ಹೇಳಿಕೆಯಿಂದ ಮದುವೆ ನಿಶ್ಚಿಯಗೊಳ್ಳುವುದಿಲ್ಲ. 'ಇದ್ದತ್' ಅವಧಿಯಲ್ಲಿ ಮಾತ್ರ ಜೀವನಾಂಶ ಸೀಮಿತಗೊಳ್ಳದೆ ಅದು ಈಗ ಮಹಿಳೆಯ ಹಕ್ಕು.*

*ಇಂಡೋನೇಶಿಯಾ, ಮಲೇಶಿಯಾ, ಬ್ರೂನೈನಲ್ಲಿ ಬಹುಪತ್ನಿತ್ವ ನಿಷೇಧಿಸಲಾಗಿದೆ.*

*ಈಜಿಪ್ಟ್, ಸಿರಿಯಾ ಮತ್ತು ಟ್ಯುನಿಸಿಯಾದಲ್ಲಿ ಬದುಕುಳಿದ ಸಂಗಾತಿಗೆ ಉತ್ತರಾಧಿಕಾರದ ಹಕ್ಕನ್ನು ವಿಸ್ತರಿಸಲಾಗಿದೆ.*

***ಕೃಪೆ: ದಿ ವೀಕ್***

---

ಮದುವೆಯ ಒಪ್ಪಂದದಲ್ಲಿ ನಿಗದಿಪಡಿಸಿದ ಕರಾರು ಉಲ್ಲಂಘನೆಗೊಂಡ ಪಕ್ಷದಲ್ಲಿ, ಮಹಿಳೆಯು ತನ್ನ ಹಕ್ಕುಗಳ ಹಿತ ರಕ್ಷಣೆ ಕಾಪಾಡಿಕೊಳ್ಳಲು ಏಕ ರೀತಿಯ ಉನ್ನತ ಮಟ್ಟದ "ನಿಖಾನಾಮ" ಜಾರಿಯಲ್ಲಿ ಇದ್ದಲ್ಲಿ ಖಂಡಿತ ಉಪಯೋಗ ವಾಗುವುದು ಎಂದು ತೊರೆಯಲ್ಪಟ್ಟ ಹಲವಾರು ಮಹಿಳೆಯರು ಮತ್ತು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತೆ ಯರು ಭಾವಿಸುತ್ತಾರೆ.

ಮುಸ್ಲಿಂ ಪರ್‌ಸನಲ್ ಲಾ ಸಮಿತಿಯು ಈ ವಿಷಯ ಕುರಿತಂತೆ ಒಂದು ಕರಡು ಪತ್ರ ತಯಾರಿಸಿ ಮುಸ್ಲಿಂ ಅಭಿಪ್ರಾಯ ಸೂಚಿಸುವ ಹಲವಾರು ಸಮಿತಿಗಳಿಗೆ ಕಳುಹಿಸಿ ದ್ದಾರೆ. ಕೆಲವು ತಿದ್ದುಪಡಿಗಳ ಜೊತೆಗೆ ಈ ಕರಡು ಪತ್ರವು ಅಕ್ಟೋಬರ್ 29 ರಿಂದ ಬೆಂಗಳೂರಿನಲ್ಲಿ ಮೂರು ದಿನ ನಡೆಯುವ ಸಮಿತಿಯ ಸಾಮಾನ್ಯ ಸರ್ವ ಸಭೆಯಲ್ಲಿ ಅಂಗೀಕಾರಗೊಳ್ಳುವ ಭರವಸೆ ಇದೆ. ಇದರ ಜೊತೆಗೆ ಮುಸ್ಲಿಂ ಪಂಗಡದ ತಲಾಖ್ ಪದ್ಧತಿಯ ಮಾರ್ಪಾಡನ್ನು ಕೂಡಾ ಪರಿಗಣಿಸುವ ಸಾಧ್ಯತೆ ಇದೆ.

ಆಕೆಗೆ ಯಾವುದೇ ರೀತಿಯಾದ ನೋಟೀಸ್ ನೀಡುವ ಅಗತ್ಯವಿಲ್ಲ. ಮುಸ್ಲಿಂ ಪಂಗಡದ ಸುಪ್ರಸಿದ್ಧ ವಿಚ್ಛೇದನ ನಮೂನೆ "ತಲಾಕ್-ಅಲ್-ಬಿದಾತ್, ಅಟ್"ನಲ್ಲಿ ಒಂದೇ ಉಸಿರಿನಲ್ಲಿ ಮೂರು ಸಲ ತಲಾಖ್ ಎಂದು ಉಚ್ಚರಿಸಿದರೆ ಖಂಡಿಸಿದ ಗಂಡಸರು ವಿಚ್ಛೇದನ ಪಡೆಯಬಹುದು. ಗಂಡ ಮತ್ತು ಹೆಂಡತಿ ಇಬ್ಬರೂ ಸಮ್ಮತಿಸಿದಲ್ಲಿ ವಿಚ್ಛೇದನ, ಪಡೆಯಲು ಸಾಧ್ಯ ಆಗುತ್ತದೆ. ಆದರೆ ಗಂಡನ ಸಮ್ಮತಿಯಿಲ್ಲದೆ ವಿಚ್ಛೇದನ ಪಡೆಯಲು ಹೆಂಡತಿಗೆ ಅಸಾಧ್ಯ.

'ತಲಾಖ್' ಹೇಳಿ ಸುಲಭವಾಗಿ ವಿಚ್ಛೇದನ ಪಡೆಯುವ ಗಂಡಸರಿಗೆ, ಈ ಕರಡು ಪತ್ರ ತಡೆ ಒಡ್ಡಿ ಕೆಲವು ಐದು ತೊಡಕಿನ ಸನ್ನಿವೇಶಗಳನ್ನು ವಿವರಿಸುತ್ತದೆ. ಅದರಂತೆ, ಹೆಂಡತಿ ಈ ಐದು ಸನ್ನಿವೇಶಗಳಲ್ಲಿ ವಿಚ್ಛೇದನ ಪಡೆಯಲು ದಾವಾ ಹೂಡುವ ಅವಕಾಶ ಕಲ್ಪಿಸುತ್ತದೆ. ತೊಡಕಿನ ಐದು ಸನ್ನಿವೇಶಗಳು ಯಾವುವೆಂದರೆ :

1) ಗಂಡನು ಎರಡು ವರ್ಷಕ್ಕೂ ಮೀರಿ ನಾಪತ್ತೆಯಾಗಿದ್ದು ಆತನ ಬಗ್ಗೆ ಆಕೆಗೆ ಗೊತ್ತೇ ಆಗದಿದ್ದರೆ;
2) ಗಂಡನು ಒಂದು ವರ್ಷಕ್ಕೆ ಜೀವನಾಂಶ ನೀಡಲು ನಿರಾಕರಿಸಿದಲ್ಲ.

### "ನಿಖಾನಾಮ" ತಿದ್ದುಪಡಿ ಹೊಸತೇನೂ ಅಲ್ಲ

*ಮುಸ್ಲಿಂ ಪಂಗಡದಲ್ಲಿ ಏಕರೀತಿಯ ಉನ್ನತ ಮಟ್ಟದ 'ನಿಖಾನಾಮ'ದ ಅವಶ್ಯಕತೆ ಮತ್ತು ಉದ್ದೇಶ ಹೊಸತೇನಲ್ಲ. ವಿಚಾರವಂತರು ಅನೇಕ ಸಲ ಸಲಹೆ ಸೂಚಿಸಿದ್ದಾರೆ.*

*1936ರಲ್ಲಿ ಮೌಲಾನಾ ಅಶ್ರಫ್ ಅಲಿ ತನಾವಿ "Successfull soluition for oppressed women" ಎಂಬ ಕಿರುಹೊತ್ತಿಗೆಯಲ್ಲಿ ಉನ್ನತ ಮಟ್ಟದ ಏಕರೀತಿಯ 'ನಿಖಾನಾಮ'ದ ಅವಶ್ಯಕತೆ ಇದೆ ಎಂದು ವಾದಿಸಿದ್ದಾರೆ. ಮೂರು ವರುಷಗಳ ತರುವಾಯ ಡಾ|| ಮೊಹಮ್ಮದ್ ಇಕ್ಬಾಲ್ "Reconstruction of Religious thoughts in Islam" ಈ ವಿಷಯದ ಬಗ್ಗೆ ಮರು ಚಿಂತನೆ ಮಾಡಿದ್ದಾರೆ.*

*1995ರಲ್ಲಿ 'ಇಸ್ಲಾಮಿಕ್ ಫಿಕ್ ಅಕಾಡೆಮಿ' 'ನಿಖಾನಾಮ'ವನ್ನು ವಿವರವಾಗಿ ಚರ್ಚಿಸಿ ಹಲವಾರು ಸಲಹೆಗಳನ್ನು ಸೂಚಿಸಿದೆ. ಮುಸ್ಲಿಂ ಪರ್ಸನಲ್ ಲಾ ಸಮಿತಿಯ ಮಹಿಳಾ ಸದಸ್ಯರು ಈ ವಿಷಯದ ಬಗ್ಗೆ ಹಲವಾರು ಬಾರಿ ಮೊರೆ ಇಟ್ಟಿದ್ದಾರೆ.*

*ಕೃಪೆ : ದಿ ವೀಕ್*

ಇಸ್ಲಾಮಿಕ್ ಕಾನೂನಿನಡಿಯಲ್ಲಿ, ಗಂಡ ಅಥವಾ ಹೆಂಡತಿಯ ಮರಣದ ನಂತರ ಅಥವಾ ವಿಚ್ಛೇದನದ ನಂತರ ಮದುವೆಯು ನಿಷ್ಕ್ರಿಯಗೊಳ್ಳುತ್ತದೆ. ಹೆಂಡತಿಯ ಮರಣದ ತಕ್ಷಣ ಗಂಡ ಮರು ಮದುವೆ ಮಾಡಿಕೊಳ್ಳಬಹುದು. ಆದರೆ, ಹೆಂಡತಿಯು ಗಂಡನ ಸಾವಿನ ನಂತರ ತಕ್ಷಣವೇ ಮದುವೆ ಯಾಗಲು ಅವಕಾಶವಿಲ್ಲ. ಆಕೆ ಕರಾರಾದ ಅವಧಿ 'ಇದ್ದತ್' ಮುಗಿಯುವವರೆಗೆ ಕಾಯಬೇಕಾಗುತ್ತದೆ. 'ಇದ್ದತ್' ಎಂದು ಕರೆಯಲ್ಪಡುವ ಈ ಅವಧಿಯು ಗಂಡ ಸತ್ತ ನಾಲ್ಕು ತಿಂಗಳು ಮತ್ತು 10 ದಿನಗಳವರೆಗೆ ಇರುತ್ತದೆ. ಆಕೆ ಗರ್ಭಿಣಿಯಾಗಿದ್ದರೆ ಪ್ರಸವವಾಗುವರೆಗೂ ಈ ಅವಧಿ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಆಕೆ ಮರು ವಿವಾಹವಾಗಲು ನಿರ್ಬಂಧವಿದೆ. ಗಂಡ, ಹೆಂಡತಿ ಇಬ್ಬರೂ ವಿಚ್ಛೇದನ ಬಯಸಬಹುದು. ಆದರೆ ವಿಚ್ಛೇದನ ಗಂಡನಿಗೆ ತುಂಬ ಸುಲಭವಾಗಿ ದೊರೆಯುತ್ತದೆ. 'ತಲಾಖ್' ಎಂದು ಮೂರು ಸಲ ಒಂದೇ ಉಸಿರಿಗೆ ಹೇಳುವ ವೇಳೆಯಲ್ಲಿ ಹೆಂಡತಿ ಸಮ್ಮುಖದಲ್ಲಿ ಇರಬೇಕಾಗಿಲ್ಲ ಅಥವಾ

3) ಗಂಡನು ಮಾನಸಿಕ ಕ್ಷೋಭೆಯಿಂದ ನರಳುತ್ತಿದ್ದಲ್ಲಿ
4) ಗಂಡ ಹೆಂಡತಿಯರು ಒಂದು ವರ್ಷಕ್ಕೂ ಹೆಚ್ಚುಕಾಲ ಬೇರೆ ಬೇರೆಯಾಗಿದ್ದಲ್ಲಿ
5) ಗಂಡನು V.D. ಯಿಂದ ನರಳುತ್ತಿದ್ದಲ್ಲಿ ಹಾಗೂ ಹೆಂಡತಿಯನ್ನು ಕ್ರೂರವಾಗಿ ಹಿಂಸಿಸುತ್ತಿದ್ದಲ್ಲಿ.

ಮೆಹರ್ ಮತ್ತು ಜೀವನಾಂಶ ಹಕ್ಕುಗಳೆರಡೂ ಮುಸ್ಲಿಮ್ ಪರಸನಲ್ ಕಾನೂನಿನ ಒಂದು ಭಾಗವೇ ಆಗಿದ್ದರೂ, ಆ ಸಮುದಾಯದ ಗಂಡಸರು ಅವು ತಡೆಯಾಜ್ಞೆ ಎಂದು ಪರಿಗಣಿಸುವುದಿಲ್ಲ. ವಿಚ್ಛೇದನ ಸಮಯದಲ್ಲಿ ಖಾಜಿ ನೆರವಿನಿಂದ ಹೆಸರಿಗೆ ಮಾತ್ರ ಕನಿಷ್ಠ ಮಾತ್ರವನ್ನು "ನಿಖಾನಾಮ"ದಲ್ಲಿ ಸೇರಿಸಿ, ಜೀವನಾಂಶ ಕೊಡಲು ನಿರಾಕರಿಸುತ್ತಾರೆ. ಈ ಕರಡು ಪತ್ರದಲ್ಲಿ ಮೆಹರ್ ಮತ್ತು ಜೀವನಾಂಶಕ್ಕೆ ಸಂಬಂಧಿಸಿದಂತೆ, ಮಹಿಳೆಯರ ಹಕ್ಕುಗಳ ಹಿತಾಸಕ್ತಿ ಕಾಯ್ದುಕೊಳ್ಳಲು ಸಾಕಷ್ಟು ಅವಕಾಶ ನೀಡಿದೆ.

*ಕೃಪೆ : ದಿ ವೀಕ್*

*ಕನ್ನಡಕ್ಕೆ: ಸವಿತ ಎ.*

# ಮುಸ್ಲಿಮ್ ಮಹಿಳಾ ಆರ್ಗನೈಸೇಷನ್

*ಆಲ್ ಇಂಡಿಯಾ ಮುಸ್ಲಿಂ ಪರ್‌ಸನಲ್ ಲಾ ಸಮಿತಿಯ ಸದಸ್ಯರಲ್ಲೊಬ್ಬರಾದ ಅಮೀನ್ ರಿಜ್ವಿಯವರು, ಮಹಿಳಾ ಹಕ್ಕುಗಳು ಈಗಾಗಲೇ ಇವೆ, ತಿದ್ದುಪಡಿ ಹೊಸತೇನಲ್ಲ, ಆದರೆ ಅವು ಪೂರ್ಣ ರೀತಿಯಲ್ಲಿ ನೆರವೇರುತ್ತಿಲ್ಲ ಅಥವಾ ಸ್ಪಷ್ಟವಾಗಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ. ಮದುವೆಯ ಒಪ್ಪಂದಕ್ಕೆ ಸಮ್ಮತಿ ನೀಡುವಾಗ ಎರಡೂ ಕಡೆಯ ಜನರಲ್ಲಿ ಒಳ್ಳೆಯ ಮನಸ್ಸಿರಬೇಕು. ಇಲ್ಲದಿದ್ದಲ್ಲಿ ಒಪ್ಪಂದದ ಪವಿತ್ರತೆಗೆ ಮಸಿ ಹಚ್ಚಿದಂತೆ ಆಗುತ್ತದೆ. ಪ್ರಗತಿಯ ಪಥದತ್ತ ಇದು ಮೊದಲನೆ ಹೆಜ್ಜೆ ಎಂದರಿತ ಅವರು, 'ನಿಖಾನಾಮ' ತಿದ್ದುಪಡಿ ಮಾಡುವಲ್ಲಿ ಅಂತ್ಯ ಕಾಣದೆ, ಆರೋಗ್ಯ ಮತ್ತು ಶಿಕ್ಷಣಗಳ ವಿಷಯದಲ್ಲಿ ಗಂಭೀರವಾಗಿ ಸಂಭೋದಿಸುವ ಅವಶ್ಯಕತೆ ಇದೆ ಎನ್ನುತ್ತಾರೆ. ಹಾಗೂ ಈ ತರಹದ ಗಂಭೀರ ವಿಷಯಗಳನ್ನು ಉದ್ದೇಶಿಸುವಲ್ಲಿ ಹೆಚ್ಚು ವ್ಯಾಪಕವಾಗಿ ಯೋಜನೆಯೊಂದರ ತಯಾರಿಯಲ್ಲಿದ್ದೇವೆ ಎನ್ನುತ್ತಾರೆ.*

*ಕೃಪೆ : ದಿ ವೀಕ್ (ಜೋಮಿ ಥಾಮಸ್)*

*(ಕನ್ನಡಕ್ಕೆ : ಸುಚಿತ ವಿ.)*

ಆಲ್ ಇಂಡಿಯಾ ಮುಸ್ಲಿಂ ಪರ್‌ಸನಲ್ ಲಾ ಸಮಿತಿಯು ತನ್ನ ಸರ್ವಸಾಮಾನ್ಯ ಸಭೆಯನ್ನು ಬೆಂಗಳೂರಿನಲ್ಲಿ ಅಕ್ಟೋಬರ್ 28ರಿಂದ 3 ದಿನಗಳ ಕಾಲ ನಡೆಸಿತು. ಬೆಂಗಳೂರಿನ "ಮುಸ್ಲಿಂ ಮಹಿಳಾ ಆರ್ಗನೈಸೇಷನ್(ರಿ)" ಸಂಘವು ಆಲ್ ಇಂಡಿಯಾ ಮುಸ್ಲಿಂ ಪರ್‌ಸನಲ್ ಲಾ ಸಮಿತಿಗೆ ನೀಡಿದ ಮನವಿಯನ್ನು 'ಮಾನಸ' ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ.

ಆಲ್ ಇಂಡಿಯಾ ಮುಸ್ಲಿಂ ಪರಸನ್‌ಲ್ ಲಾ ಸಮಿತಿಯ ಅಧ್ಯಕ್ಷ ಪೂಜ್ಯ ಮೌಲಾನಾ ಮುಜಾಹಿದುಲ್ ಇಸ್ಲಾಂ ಖಾಸಿಮಿನ್, ನವದೆಹಲಿ ಸದ್ಯದ ಬೀಡು ಬೆಂಗಳೂರು ದಿನಾಂಕ 28-10-2000

ಅಸ್ಸಾಲಾಮ್ ಅಲೈಕುಮ್

ಆಲ್ ಇಂಡಿಯಾ ಮುಸ್ಲಿಂ ಪರ್‌ಸನಲ್ ಲಾ ಸಮಿತಿಯ ಅಧ್ಯಕ್ಷರಾದ ನಿಮ್ಮ ಹಾಗೂ ಸಮಿತಿಯ ಎಲ್ಲ ಉಲೆಮಾಗಳನ್ನು ಎರಡು ವಿಷಯಗಳ ತಾವು ಬಗೆಹರಿಸಬೇಕು ಎಂದು ವಿನಂತಿಸಿಕೊಳ್ಳುತ್ತಾ ಆ ಎರಡು ವಿಷಯವನ್ನು ತಮ್ಮ ಗಣನೆಗೆ ತಂದಿದ್ದೇವೆ.

ನಮ್ಮ ಮಹಿಳಾ ಸಂಘಟನೆಯು (ಮು.ಮ.ಆ) ಹಿಂದುಳಿದ, ಅನಕ್ಷರಸ್ಥ ಮಹಿಳೆಯರ ಏಳಿಗೆಗಾಗಿ ದುಡಿಯುತ್ತಿದೆ. ಶೋಷಣೆಗೆ ಒಳಪಟ್ಟ ಮಹಿಳೆಯರನ್ನು ಸ್ವಾಲಂಬಿಗಳನ್ನಾಗಿಸಲು ಪ್ರಯತ್ನ ಪಡುತ್ತಿದ್ದೇವೆ. ಈ ಕೆಲಸ ಕಾರ್ಯದಲ್ಲಿ ನಾವು ಸಾಕಷ್ಟು ಸಾಧನೆ ಮಾಡಿದ್ದೇವೆ.

ಈ ನಿಟ್ಟಿನಲ್ಲಿ ಕೆಲಸ ಮಾಡುವಾಗ ಸಮಸ್ಯೆಗಳ ಸರಮಾಲೆಗಳನ್ನು ಎದುರಿಸಬೇಕಾಯಿತು. ವಿಶೇಷವಾಗಿ, ಮುಸ್ಲಿಂ ಮಹಿಳೆಯರು ವರದಕ್ಷಿಣೆ ಪಿಡುಗಿಗೆ ಬಲಿಯಾಗುತ್ತಿರುವುದು, ತಲಾಖ್ ಪದ್ಧತಿಯಿಂದ ನಿರಂತರ ಅಭದ್ರತೆಯಿಂದ ನರಳುತ್ತಿರುವುದು, ಜೀವನಾಂಶವಿಲ್ಲದೆ ಮಕ್ಕಳು ಮರಿಗಳೊಂದಿಗೆ ಒಂದು ಹೊತ್ತಿನ ಗಂಜಿಗೆ ಪಾಡು ಪಡುತ್ತಿರುವುದು ಇದೇ ಮುಂತಾದುವುಗಳಿಗೆ ಪರಿಹಾರ ದೊರಕಬೇಕಾಗಿದೆ.

ಮುಸ್ಲಿಂ ಮಹಿಳೆ ಅನುಭವಿಸುತ್ತಿರುವ ಈ ಬವಣೆಗಳಿಗೆ ಪರಿಹಾರ ಸೂಚಿಸುವ ವಿಧಾನ ತಮಗೆ ಮತ್ತು ಸಮಿತಿಯ ಎಲ್ಲ ಸದಸ್ಯರಿಗೆ ಅರಿವಿದೆ. ಮುಸ್ಲಿಂ ಮಹಿಳೆಯರು ಹಲವಾರು ಸಭೆಗಳಲ್ಲಿ ಚರ್ಚಿಸಿ ಗಮನಕ್ಕೆ ತೆಗೆದುಕೊಂಡಿರುವ ಎರಡು ವಿಷಯಗಳನ್ನು ತಾವು ಬಗೆಹರಿಕಸಬೇಕು ಎಂದು ವಿನಂತಿಸಿಕೊಳ್ಳುತ್ತಾ ಆ ಎರಡು ವಿಷಯವನ್ನು ತಮ್ಮ ಗಣನೆಗೆ ತಂದಿದ್ದೇವೆ.

1). ವರದಕ್ಷಿಣೆಗಾಗಿ ಹೆಂಡತಿಯನ್ನು ಮತ್ತು ಅವಳ ತಂದೆ ತಾಯಿಯನ್ನು ಪೀಡಿಸಬಾರದು, ಹೆಂಡತಿಯನ್ನು ಹಿಂಸೆ ಮಾಡಬಾರದು ಮತ್ತು ಜೀವನ ಪರ್ಯಂತ ತೊರೆಯಬಾರದು, ತೊರೆದಲ್ಲಿ ಆತನ ವಿರುದ್ಧ ಮೊಕದ್ದಮೆ ಹೂಡಲು ಅವಕಾಶ ನೀಡಬೇಕು, ಎಂದು ಮದುವೆ ಗಂಡು ಒಪ್ಪಿಗೆ ಸೂಚಿಸಿ ಲಿಖಿತ ಪತ್ರವೊಂದನ್ನು 'ನಿಖಾನಾಮ'ದ ಜೊತೆ ಅಳವಡಿಸಿಕೊಳ್ಳಬೇಕು.

2) ಗಂಡನು ಒಂದೇ ಉಸಿರಿಗೆ ಮೂರು ತಲಾಖ್ ನೀಡಿದ್ದು, ಅದನ್ನು ಒಂದೇ ತಲಾಖ್ ಎಂದು ಪರಿಗಣಿಸಬೇಕು. ಅವನು ಪ್ರತಿ 'ಇದ್ದತ್' ಅವಧಿಯಲ್ಲಿ ತಲಾ ಒಂದರಂತೆ ತಲಾಖ್ ನೀಡಬೇಕು. ತನ್ನ ಮಕ್ಕಳ ಲಾಲನೆ ಪೋಷಣೆಯನ್ನು ಸಂಪೂರ್ಣ ಜವಾಬ್ದಾರಿ ಹೊತ್ತು ಜೀವನಾಂಶ ನೀಡಬೇಕು.

ಇವೆರಡು ಪರಿಹಾರಗಳನ್ನು ಸಹಾನುಭೂತಿಯಿಂದ ತಾವು ತಮ್ಮ ಗಮನಕ್ಕೆತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಕಳಕಳಿಯಿಂದ ವಿನಂತಿಸಿ ಕೊಳ್ಳುತ್ತೇವೆ. ಇದನ್ನು ಅನುಕರಿಸಲು ತಾವು ಎಲ್ಲ ಮುಸ್ಲಿಂ ಪಂಗಡಗಳಿಗೆ ಸೂಚಿಸಿದ್ದಲ್ಲಿ, ಎಲ್ಲ ಶೋಷಿತ ಮಹಿಳೆಯರು ನಿಮಗಾಗಿ ಹಾಗೂ ಸಮಿತಿಯ ಎಲ್ಲ ಸದಸ್ಯರ ಪರವಾಗಿ ನಿರಂತರವಾಗಿ ಪ್ರಾರ್ಥನೆ ಸಲ್ಲಿಸುತ್ತೇವೆ.

ಧನ್ಯವಾದಗಳೊಂದಿಗೆ,

ಸಹಿ

ಅಮತುಲ್ ರೆಹಮಾನ್ ರೆಹಮಾನಿಸ್ಥಾಪಿತಿ ಮತ್ತು

ಮುಖ್ಯಕಾರ್ಯದರ್ಶಿ ಹಾಗೂ ಸಂಘದ ಪದಾಧಿಕಾರಿಗಳು

# ಮಹಿಳೆಯೆಂದರೆ.....

○ ಲಕ್ಷ್ಮಿ ಎ.

ದ್ವಿತೀಯ ಪಿ.ಯು.ಸಿ.ಯನ್ನು ತನ್ನ ಊರಿನಲ್ಲಿದ್ದ ಪಿ.ಯು.ಸಿ. ಕಾಲೇಜಿನಲ್ಲಿ ಮುಗಿಸಿ ತನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ದೂರದಲ್ಲಿದ್ದ ಬೆಂಗಳೂರಿನ ಕಾಲೇಜಿಗೆ ಹೋಗಬೇಕಾಯಿತು ಸರಿತಾ. ಈಕೆ ಸುಂದರವಾಗಿದ್ದು ಎಲ್ಲರ ಬಳಿಯು ಒಳ್ಳೆಯ ಹುಡುಗಿಯೆಂದು ಹೆಸರು ಪಡೆದಿದ್ದಳು. ಆದರೆ ಅವಳ ಊರಿನಿಂದ ಬರುತ್ತಿದ್ದಂತಹ ಹುಡುಗರು, ಅವಳ ಅಕ್ಕ ಪಕ್ಕದ ಮನೆಯವರೇ ಬಸ್ಸಿನಲ್ಲಿ ಅವಳನ್ನು ಕಿಚಾಯಿಸಲು ಪ್ರಾರಂಭ ಮಾಡಿದರು. ಅವಳಿಗೆ ಏನಾದರೂ ಕುಳಿತುಕೊಳ್ಳಲು ಸೀಟು ಇಲ್ಲದಿದ್ದರೆ ಒಂದು ಹುಡುಗ ಅವನ ಪಕ್ಕದವನಿಗೆ ಹೇಳುವುದು, ನೋಡೋ ಮಗ ಪಾಪ ನಿಂತಿದ್ದಾರೆ. ಒಂದು ಸೀಟು ಕೊಡಿಸೋ ಪಾಪ ಕಾಲು ನೋಯುತ್ತಿದೆ ಎನ್ನುವುದು ಮತ್ತು ಪರೋಕ್ಷವಾಗಿ ಬರುವಯೇನೋ ಸಿನಿಮಾಕ್ಕೆ ಹೋಗೋಣ, ಪಾರ್ಕಿಗೆ ಹೋಗೋಣ ಎಂದು ಅವನ ಸ್ನೇಹಿತನಿಗೆ ಹೇಳುವ ರೀತಿ ಅವಳಿಗೆ ಹೇಳುವುದು ಮತ್ತು ಅವಳು ಹಾಕಿಕೊಂಡು ಬರುವ ಡ್ರೆಸ್‌ನ ಬಗ್ಗೆಯು ಹೊಗಳಿಕೆಗಳನ್ನು ವ್ಯಕ್ತಿ ಪಡಿಸುವುದು ಮಾಡುತ್ತಿದ್ದರು.

ಆದರೆ ಸರಿತಾ ಮಾತ್ರ ತನ್ನ ಬಾಯಿಯನ್ನು ಮುಚ್ಚಿಕೊಂಡು ಅವರು ಏನೇ ನುಡಿದರು ನನಗಲ್ಲ ಎಂಬಂತೆ ಸಹಿಸಿಕೊಂಡು ಹೋಗುತ್ತಿದ್ದಳು. ಪಾಪ ಅವಳಿಗೆ ಅವಳ ತಂದೆಗೇಳಲು ಹೆದರಿಕೆ. ಏಕೆಂದರೆ ಅವರ ತಂದೆ ತುಂಬಾ ಮುಂಗೋಪಿಯಾಗಿದ್ದರು. ಅವರಿಗೆ ಕೋಪ ಬಂದರೆ ಏನೇ ಮಾಡಲು ತಯಾರಿದ್ದರು. ಇನ್ನು ತಮ್ಮಂದಿರು ತುಂಬಾ ಸೌಮ್ಯವಾದ ಸ್ವಭಾವವುಳ್ಳವರಾಗಿದ್ದರು. ಅವರಿಗೆ ಜಗಳ ಮತ್ತು ಹುಡುಗರ ಜೊತೆ ಜೋರಾಗಿ ಮಾತಾಡುವುದು ಹಿಡಿಸುತ್ತಿರಲಿಲ್ಲ. ಇನ್ನೂ ತಾಯಿ, ಕೋಪ ಬಂದರು ಏನು ಮಾಡಲು ಸಾಧ್ಯವಾಗದೇ ಮಗಳ ಕಷ್ಟ ಕೇಳಿ ಸ್ವಲ್ಪ ಕೋಪಗೊಂಡು ನಂತರ ತಾನು ಸಮಾಧಾನಗೊಂಡು ಮಗಳಿಗೂ ಸಾಂತ್ವಾನ ಹೇಳುತ್ತಿದ್ದಳು.

ಆದರೆ ಹುಡುಗರ ತೊಂದರೆ ಮತ್ತು ಅವರು ಆಡುತ್ತಿದ್ದ ಚುಚ್ಚುಮಾತುಗಳನ್ನು ಸಹಿಸದ ಸರಿತಾ ಅವರ ವಿರುದ್ಧ ಹಿಂತಿರುಗಿ ಬಿದ್ದಳು. ಇದನ್ನು ಸಹಿಸದ ಹುಡುಗರು ಇನ್ನಷ್ಟು ಕಿಚಾಯಿಸಲು ಪ್ರಾರಂಭಿಸಿದರು ಜೊತೆಗೆ Greetings ಪತ್ರಗಳು ಬರಲು ಪ್ರಾರಂಭವಾದಾಗ ಅವುಗಳನ್ನು ಸಹಿಸದ ಆಕೆ ತನ್ನ ತಂದೆಗೆ ಹೇಗೊ ಕಷ್ಟಪಟ್ಟು ತಿಳಿಸಿದಳು. ಇದನ್ನು ತಿಳಿದ ತಂದ ಅವಳನ್ನು ಕಿಚಾಯುಸುತ್ತಿದ್ದ ಹುಡುಗರಿಗೆ ಊರಿನ ಹಿರಿಯರಿಂದಲೇ ಸರಿಯಾದ ಪಾಠ ಕಲಿಸಿದರು. ಇದು ಇಲ್ಲಿಗೂ ಶಾಂತವಾಗದೇ ಮತ್ತಷ್ಟು ಹೊಸ ಹೊಸ ವಿಷಯಗಳ ಹುಟ್ಟಿಗೆ ಕಾರಣವಾಯಿತು. ಅವುಗಳೆಂದರೆ, ಅವಳು ಯಾವುದೋ ಹುಡುಗನ ಜೊತೆ ಪಾರ್ಕಿನಲ್ಲಿ ಸುತ್ತುತ್ತಾಳೆ ಸಿನಿಮಾಕ್ಕೆ ಹೋಗುತ್ತಾಳೆ ಎಂದು ಹುಡುಗರಿಗೆ ಮಾತ್ರವಲ್ಲದೆ ದೊಡ್ಡ ದೊಡ್ಡ ಹಿರಿಯರಿಗೂ ಕಿವಿ ಮಾತುಗಳಾದವು. ಆ ಊರಿನಲ್ಲಿರುವ ಕೆಲವು ಗಂಡಸರಿಗೂ ಈಕೆಯ ಮೇಲೆ ಕಣ್ಣಿತ್ತು. ಅವರು ಪರೋಕ್ಷವಾಗಿ ಆ ಹುಡುಗರ ಸಹಾಯಕ್ಕೆ ಮುಂದಾದರು. ಅಷ್ಟೇ ಅಲ್ಲ ಈ ಹುಡುಗರು ಅವಳ ಮನೆಯ ಪಕ್ಕದಲ್ಲಿದ್ದ ಒಬ್ಬ ಹೆಂಗಸಿಗೆ ಈ ವಿಷಯವನ್ನು ನಂಬುವಂತೆ ಚಾತುರ್ಯದಿಂದ ಹೇಳಿದ್ದರು ಆ ಹುಡುಗರು.

ಮತ್ತೊಂದು ದಿನ ಆಕೆಯ ದ್ವಿತೀಯ ಪದವಿಯ ಫಲಿತಾಂಶ ಬಂತು. ಅಲ್ಲಿ ಆಕೆ ಅನುತ್ತೀರ್ಣಳಾಗಿದ್ದ ಕಾರಣ ತಾನು ಚೆನ್ನಾಗಿ ಬರೆದಿದ್ದರು ಈ ರೀತಿಯಾಯಿತಲ್ಲ ಎಂದು ದುಃಖ ತುಂಬಿದ ಮನಸ್ಸಿನಿಂದ ಅಳಲು ಪ್ರಾರಂಭಿಸಿದಳು. ಅಳುತ್ತಾ ಕೆಳಗೆ ತಲೆಸುತ್ತಿ ಬಿದ್ದಳು. ನಂತರ ಆಕೆಯ ಸ್ನೇಹಿತೆಯರು ಮತ್ತು ಉಪನ್ಯಾಸಕರು ಕಾಲೇಜಿನ ಪಕ್ಕದ ಆಸ್ಪತ್ರೆಗೆ ಸೇರಿಸಿದರು. ತುಂಬಾ ಹೊತ್ತಾಗಿದ್ದ ಕಾರಣ ಆಕೆಯ ಮನೆಗೆ ಫೋನು ಮಾಡಿ ಸರಿತಾಗೆ ತಲೆಸುತ್ತಿ ಬಿದ್ದು ಆಸ್ಪತ್ರೆಗೆ ಸೇರಿಸಿದ್ದೇವೆ. ಸಂಜೆ ಸ್ವಲ್ಪ ಲೇಟಾಗಬಹುದೆಂದು ತಿಳಿಸಿದರು ಆಕೆಯ ಸ್ನೇಹಿತೆಯರು.

ಆದರೆ ಕೊನೆಗೆ ಅಲ್ಲಿ ಪರೀಕ್ಷೆಯ ವಿಷಯವೇ ಅವಳು ಕಾಲೇಜಿನಲ್ಲಿ ಬಿದ್ದದ್ದಕ್ಕೆ ಕಾರಣವಲ್ಲ ಆಕೆ ಗರ್ಭಿಣಿಯಾಗಿ ಭ್ರೂಣವನ್ನು ತೆಗೆಸಿದ್ದರಿಂದ ಆಸ್ಪತ್ರೆಗೆ ಸೇರಿದ್ದಾಳೆ ಎಂದು ಅವರ ಪಕ್ಕದ ಮನೆ ಆಂಟಿ ಮತ್ತೊಬ್ಬ ಹೆಂಗಸಿನೊಡನೆ ಹೇಳಿ, ಆ ಹೆಂಗಸು ಸರಿತಾಳಿಗೆ ತುಂಬಾ ಬೇಕಾದವರಾಗಿದ್ದರಿಂದ ಅವಳ ಬಳಿ ಬಂದು ಈ ವಿಷಯದ ಬಗ್ಗೆ ಪ್ರಸ್ತಾಪಿಸಿದರಂತೆ. ಇಲ್ಲಿ ಸರಿತಾಳ ಆಂಟಿಯ ಮನಸ್ಸಿನಲ್ಲಿ ಈ ಭಾವನೆ ಮೂಡಬೇಕಾದರೆ ಆ ಹುಡುಗರ ಗಾಳಿಮಾತುಗಳು ಎಷ್ಟೊಂದು ಪ್ರಭಾವ ಬೀರಿವೆ

ಅಲ್ಲವೆ? ಇಷ್ಟಾದರೂ ಸರಿತಾ ಬಾಯಿಬಿಡಲೇ ಇಲ್ಲ. ತಾನು ಹೆಚ್ಚು ನಂಬಿದ್ದ ಆಂಟಿಯೇ ಈ ರೀತಿ ಮಾತನಾಡಿದರಲ್ಲ ಎಂದು ಆಕೆಯ ಮನಸ್ಸಿನ ಮೇಲೆ ತುಂಬಾ ಗಾಢವಾದ ಪೆಟ್ಟಾಯಿತು. ಅದೇ ಇಂತಹ ವಿಷಯಗಳನ್ನು ಒಂದು ಹುಡುಗಿ ಒಬ್ಬ ಹುಡುಗನು ಇಂತಹ ಕೆಲಸಗಳನೆಲ್ಲ ಮಾಡಿದ್ದರೂ ಸಹ ಹೋಗಿ ಹೇಳಿದರೆ ಅಯ್ಯೋ ಈ ಹುಡುಗಿಗೆ ಸ್ವಲ್ಪವೂ ನಾಚಿಕೆಯಿಲ್ಲದೆ ಇಂತಹ ವಿಷಯ ಹೇಳುತ್ತಾಳಲ್ಲ ಎಂದು ನಿಂದಿಸುತ್ತಾರೆ. ಬಸ್ಸಿನಲ್ಲಿ ಕುಳಿತು ನಾವು ಹುಡುಗಿಯರು ಒಂದು ಹುಡುಗನನ್ನು ಕಿಚಾಯಿಸಿದರೆ ಅಲ್ಲಿ ಆ ಹುಡುಗಿಯು ತಮಾಷೆ ಮಾಡುತ್ತಿದ್ದಾಳೆ ಎನ್ನುವುದಿಲ್ಲ ಈ ಸಮಾಜ. ಬದಲಿಗೆ ಗಂಡುಬೀರಿ, ನಾಚಿಕೆ ಮಾನ ಮರ್ಯಾದೆಯಿಲ್ಲ ಎನ್ನುತ್ತಾರೆ.

ಏಕೆ ಈ ರೀತಿ ಹುಡುಗಿಗೆ ಮಾತ್ರ ನಾಚಿಕೆ ಮಾನ, ಮರ್ಯಾದೆ ಎನ್ನುವುದು ಬೇಕಾ? ಅಥವಾ ಅವಳು ಗಂಡಸರಿಗೆಲ್ಲರಿಗೂ ತಲೆ ತಗ್ಗಿಸಿ ಏನೆಂದರೂ ಅನ್ನಿಸಿಕೊಂಡು ಹೋಗುವ ಕ್ಷಮಯಾಧರಿತ್ರಿಯಂತಿರಬೇಕಾ? ಇಲ್ಲಿ ಒಂದು ಹುಡುಗಿಯ ಬಗ್ಗೆ ಕಟ್ಟುಕಥೆಗಳನ್ನು ಹೇಳಿದ ಕೂಡಲೇ ನಂಬುವ ಸಮಾಜ ಒಂದು ಗಂಡಸಿನ ಬಗ್ಗೆ, ಅವನು ಮಾಡಿರುವ ನಿಜವಾದ ನೀಚ ಕೆಲಸಗಳ ಬಗ್ಗೆ ಹೇಳಿದರೆ ಯಾಕೆ ನಂಬುವುದಿಲ್ಲ? ಓಹೋ ಅವನೊಬ್ಬ ಗಂಡಸು ಅವನು ಯಾವ ಕೆಲಸ ಮಾಡಿದರೂ ಸರಿ ಎಂಬುದು ತಾತಾ ಮುತ್ತಾತ ಕಾಲದಿಂದಲೂ ನಡೆದು ಬಂದಿರುವ ವ್ಯವಸ್ಥೆಯೇ?

ಇದು ನಿಜವಾಗಿಯೂ ನಿಗೂಢವಾಗಿದೆ ನನಗೆ. ಇದುವರೆಗೂ ಈ ಪ್ರಶ್ನೆಗಳಿಗೆ ಉತ್ತರ ಸಿಗುತ್ತಿಲ್ಲ. ಸಿಕ್ಕಿದರೂ ಅದು ಕೇವಲ Theoriticalಗಿ ಮಾತ್ರ ಸಿಕ್ಕಿದೆ ಹೊರತು practicalಗೀ ಸಿಗುತ್ತಿಲ್ಲ. ಇದು ಯಾವಾಗ ಸಾಧ್ಯ? ಮತ್ತೊಂದು ನನ್ನ ಮನವಿಯೇನೆಂದರೆ ಯಾವುದೇ ವಿಷಯವಾಗಲೀ ಒಂದು ಹುಡುಗಿಯ ಬಗ್ಗೆಯೇ ಆಗಲೀ ಹೆಂಗಸಿನ ಬಗ್ಗೆಯೇ ಆಗಲಿ ಅಥವಾ ಗಂಡಸಿನ ಬಗ್ಗೆಯೇ ಆಗಲಿ ಯಾರೆ ಬಂದು ಏನೇ ಹೇಳಿದರು ಅದನ್ನು ಪರೀಕ್ಷಿಸಿ ಅಂದರೆ ನಮಗೆಲ್ಲ ಗೊತ್ತಿರುವಂತೆ ಪ್ರತ್ಯೇಕ್ಷವಾಗಿ ಕಂಡರು ಪ್ರಮಾಣಿಸಿ ನೋಡಿ ಎಂಬ ನಾಣ್ನುಡಿಯನ್ನು ಅಳವಡಿಸಿಕೊಳ್ಳೋಣ, ಬೇರೊಬ್ಬರ ಕಿವಿಮಾತಿನಿಂದಾಗಿ ಒಂದು ಹೆಣ್ಣು ಮತ್ತೊಂದು ಹೆಣ್ಣಿನ ಶತೃವಾಗುವುದು ಬೇಡ. ಹೆಣ್ಣೆ ಹೆಣ್ಣಿಗೆ ಶತೃ ಎಂದು ಪುರುಷರು ಹುಟ್ಟು ಹಾಕಿರುವುದನ್ನು ನಿಜ ಪಡಿಸುವುದು ಬೇಡ.

●

## ಇತಿಹಾಸಕ್ಕೊಂದು ಪ್ರಶ್ನೆ

ನಿದ್ದೆಯಲಿ ಎದ್ದು ಹೋದವನ
ನೆನಪಿನ ಬುತ್ತಿ ಉಂಡಷ್ಟೂ ತೀರದು
ಅರಮನೆಯ ಅರಗಿಣಿಗೆ ನೂರಾರು ಕನಸು
ಅತ್ತೆ ಮಾವರ ಆತಂಕ ಸಖಿಯರ ಅನುಕಂಪ
ಅರ್ಥವಾಗದ ವಯಸು

ಅಂತಃಪುರದ ಕೆಂಬಸುತ್ತುವ
ನಲ್ಲನ ಬಗೆಗೆ ಸಂತೋಷ
ಬೊಗಸೆ ತುಂಬ ಬೆಳದಿಂಗಳು
ಕುಡಿದಷ್ಟೂ ಬೇಕೆಂಬ ತವಕ
ಮಸುಕಿಲ್ಲದ ಬೆಳಕ ಕೊನರಿಸುವ ಕನಸು
ಎದ್ದ ಬಿರುಗಾಳಿಗೆ ಕಾರ್ಮೋಡ ಕವಿದು
ಬದುಕಿಗೆ ಬರಸಿಡಿಲು ಬಡಿದಾಗ
ದಡಬಡಿಸಿ ಕಣ್ತೆರೆದರೆ ಬರಿಶೂನ್ಯ

ಕನಸ ಗೋರಿಯಲಿ ಬಯಕೆಗಳ ಹುಗಿದು
ಕಂದನ ಕಣ್ಣ ಬೆಳಕಲಿ ಬದುಕ ಸವೆತ
ನಿದ್ದೆಯಿಲ್ಲದ ರಾತ್ರಿ ಬೆಳಕ ಕಾಣದ ಹಗಲು
ಒಂಟಿ ಪಯಣದ ದಾರಿ ನಡೆದಷ್ಟೂ ದೂರ
ಪಟ್ಟದ ರಾಣಿಗೆ ಪತ್ನಿಯ ಪಟ್ಟವೂ ದಕ್ಕದ
ನಿರಾಶೆಯ ದಿನ ರಾತ್ರಿಗಳು
ಕಲಿತೆ ಬದುಕುವುದು ನಮಗಾಗಿ
ಬೋಧಿಯ ಕೆಳಗೆ ಕುಳ್ಳಿರದೆ ಜ್ಞಾನೋದಯ

ಯಾವ ಚರಿತ್ರಕಾರ ಬಂದಾನು
ನನ್ನೆದೆಯ ಕದತೆಗೆದು ಹಣಕಲು
ರಕ್ತ ಬಸಿಯುವ ಹೃದಯ
ಬಣ್ಣ ಕಾಣದ ಉಸಿರು
ರಣವಿಲ್ಲ ತಪವಿಲ್ಲ ಶೌರ್ಯ ಸಾಹಸವಿಲ್ಲ
ನೋವು ನಿಟ್ಟುಸಿರುಗಳ ಆಗರ
ಇಂಥ ಇತಿಹಾಸ ಬೇಕು ಯಾರಿಗೆ?
ನೆಲೆಯಿಲ್ಲದ ಬೆಲೆಯಿಲ್ಲದ ಬದುಕಿಗೇನರ್ಥ
ಉತ್ತರಕಾಗಿ ಕಾದಿರುವೆ.

○ *ಡಾ|| ಚಂದ್ರಮತಿ ಸೋಂದಾ*

## ಕಪ್ಪು ರಂಧ್ರ ಕೆಂಪು ವೃತ್ತ

ರಂಧ್ರ
ನಾನೊಂದು
ಪುಟ್ಟರಂಧ್ರ
ಅಥವಾ
ರಂಧ್ರವಾಗುವವಳು
ಹೆಣ್ಣೆಂದರೇನು?
ಕೇವಲ ರಂಧ್ರ
ಅದು,
ಅವಳೇನೆಂದು ನಿಶ್ಚಯಿಸುವುದು
ನಿಧಾನವಾಗಿ
ಅವಳೇ ಅದಾಗಿಬಿಡುತ್ತಾಳೆ
ತನ್ನೊಳಗೊಣ
ತನ್ನ ಪರಿಧಿ ಎಲ್ಲವ
ಹಿಂದೆಳೆದು ಕೊಂಡು
ಹಿಂದಕ್ಕೆಳುದುಕೊಳ್ಳುತ್ತಲೆ ಇರುತ್ತಾಳೆ
ಪುಟ್ಟ ರಂಧ್ರದ ಮೇಲೊಂದು
ಮುಖವಾಡವಾಗುವವರೆಗೂ

ಅವಳೊಂದು
ಕಪ್ಪುರಂಧ್ರ
ಅದೊಂದು ಕಾರಾಗೃಹ
ಒಳಗೆ ನೂರಾರು ತುಡಿತಗಳು
ಸಿಕ್ಕಿ ಸಾಯುತ್ತೇವೆ -
ನಿಧಾನವಾಗಿ
ಅವಳಿದ್ದಾಳೆ
ಅಲ್ಲಿ, ಬೀಗುತ್ತಾ
ಕಾರಾಗೃಹದ ಅಧಿಕಾರಿ ಎಂಬಂತೆ
ಸೂಚಕವಾಗಿ
ಇಡುತ್ತಾಳೆ ಕೆಂಪು ವೃತ್ತವ
ಹಣೆಯ ಮೇಲೆ.

○ ರಾಧಾ

## ಸೀಳುಗಾಯ

ಹೆಣ್ಣೆಂದರೆ
ಮೈಮನದೊಳಗೆ
ಸೀಳುಗಾಯದೊಡನೆ
ಜೀವಿಸುವ ಜೀವಿ
ಪ್ರತಿ ತಿಂಗಳೂ
ರಕ್ತ ಸ್ರವಿಸುವ
ಮೈಯಗಾಯ
ಒಂದೊಂದೂ
ಹೆಣ್ಣು ಜೀವದ ಮೇಲಿನ ಹಿಂಸೆಗೆ
ರಕ್ತ ಸ್ರವಿಸುವ ಮನದಗಾಯ
ದೇಹದ ಸೀಳುಗಾಯ
ದ್ವೇಷ ಪ್ರೀತಿಯ
ಪ್ರತಿ ಭೇಟಿಗೂ
ತೆರೆದುಕೊಳ್ಳುವ
ರಕ್ತಸಿಕ್ತ ಗ್ಯಾಟು
ಶತ್ರುವೋ, ಸಂಗಾತಿಯೋ
ಭೇಟಿ ಒಂದೇ ರೀತಿ
ಪ್ರೀತಿಯ ಭೇಟಿಯಂತೂ ಇಲ್ಲ
ಯಾಕೆಂದರೆ -
ಪ್ರೀತಿ ಏನು
ಆಸೆ ಏನು
ಮೆತುವೇನು
ಬೆಂಕಿ ಏನು
ಕಾಪಾಡಿ ಹಿಡಿದಿಡುವುದಾವುದು
ತಣ್ಣಗೆ ನಾಶ ಮಾಡುವುದುದಾವುದು
ಗಂಡಿನ ಅಂಗಕ್ಕೆ ಗೊತ್ತೆ?
ಮನಸಿಗೆ ಗೊತ್ತೆ?
ಹೆಣ್ಣಿಗೊಂದೇ ಗೊತ್ತು
ಹೇಗೊ, ಎಲ್ಲೊ ಅವ
ಬಂಧಿಸುವ
ಅವಳೇನೆಂದು
ತೀರ್ಮಾನಿಸುವ
ಸೀಳುಗಾಯವ
ದಾಟಳು ಅವಳು.

○ ರಾಧಾ

# ಜನವಿರೋಧಿ ಸುಪ್ರೀಂ ಕೋರ್ಟ್ ತೀರ್ಪು

ನರ್ಮದಾ ಕಣಿವೆಯ ಜನರ ಬದುಕುವ ಹಕ್ಕನ್ನು ಕಡೆಗಣಿಸಿ ವಿವಾದಾತ್ಮಕ ಸರ್ದಾರ್ ಸರೋವರ್ ಅಣೆಕಟ್ಟನ್ನು ಕಟ್ಟಲು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ. ಕಳೆದ ಹದಿನೈದು ವರ್ಷಗಳಿಂದ ಕಣಿವೆಯ ಜನರು ತಮ್ಮ ಹಕ್ಕಿಗಾಗಿ ನಡೆಸುತ್ತಿರುವ ಹೋರಾಟವನ್ನು ಸುಪ್ರೀಂ ಕೋರ್ಟ್ ಸಂಪೂರ್ಣವಾಗಿ ಕಡೆಗಣಿಸಿ ತೀರ್ಪನ್ನು ನೀಡಿದೆ. ಈ ಜನವಿರೋಧಿ ತೀರ್ಪನ್ನು ವಿರೋಧಿಸಿ ದೇಶದ ಹಲವೆಡೆ ಪ್ರತಿಭಟನೆಗಳು ನಡೆಯುತ್ತಿವೆ. ಬೆಂಗಳೂರಿನ ನರ್ಮದಾ ಸಾಲಿಡಾರಿಟಿ ಫೋರಂ ಅನೇಕ ಸಂಘಟನೆಗಳ ಒಕ್ಕೂಟವಾಗಿದ್ದು, ನರ್ಮದಾ ಕಣಿವೆಯ ಜನರ ಹೋರಾಟವನ್ನು ನಿರಂತರವಾಗಿ ಬೆಂಬಲಿಸುತ್ತಾ ಬಂದಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ವಿರೋಧಿಸಿ ನರ್ಮದಾ ಸಾಲಿಡಾರಿಟಿ ಫೋರಂನವರು ದಿನಾಂಕ 19-10-2000ದಂದು ಪ್ರತಿಭಟನೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಆ ದಿವಸ ಸಂಜೆ 5.30ಕ್ಕೆ ಸುಮಾರು 200ಕ್ಕೂ ಹೆಚ್ಚಿನ ಜನರು ಎಂ.ಜಿ. ರಸ್ತೆಯ ಗಾಂಧಿ ಪ್ರತಿಮೆಯ ಬಳಿ ಸೇರಿ ಪೋಸ್ಟರ್ಸ್, ಬ್ಯಾನರ್ಸ್, ಘೋಷಣೆಗಳ ಮೂಲಕ ಪ್ರತಿಭಟನೆ ವ್ಯಕ್ತಪಡಿಸಿದರು. ನಂತರ ಮೇಯೋಹಾಲಿನ ವರೆಗೂ ಎಂ. ಜಿ. ರಸ್ತೆಯ ಮೂಲಕ ಮೆರವಣಿಗೆಯಲ್ಲಿ ಹೋಗಲಾಯ್ತು. ಹಾದಿಯಲ್ಲಿ ನರ್ಮದಾ ಕಣಿವೆಯ ಹಾಡುಗಳನ್ನು ಹೇಳುತ್ತಾ, ಘೋಷಣೆ ಕೂಗುತ್ತಾ ಅಲ್ಲಲ್ಲಿ ವೃತ್ತಾಕಾರದಲ್ಲಿ ಮಾನವ ಸರಪಳಿ ಮಾಡಿನಿಂತು ಪ್ರತಿಭಟನೆ ಸೂಚಿಸುತ್ತಾ ಮೆರವಣಿಗೆ ಮುಂದುವರೆಯಿತು. ಪೋಲೀಸರು ತಡೆಯುತ್ತಿದ್ದರೂ ಬಿರುಸಿನಿಂದ ಮೆರವಣಿಗೆ ಮುಂದುವರೆದು ಸಾಗಿದ್ದು ಅರ್ಥಪೂರ್ಣವಾಗಿತ್ತು. ಮೆರವಣಿಗೆಯು ಉತ್ಸಾಹ ದಿಂದ ಸಾಗಿ ಬ್ರಿಗೇಡ್ ರಸ್ತೆಗೆ ಬಂದಾಗ ಪೋಲೀಸರು ತಡೆದುದಲ್ಲದೆ 71 ಜನರನ್ನು (26 ಜನಮಹಿಳೆಯರು, 35 ಜನ ಪುರುಷರು) 7-30ಕ್ಕೆ ಬಂಧಿಸಿ ವಿಲ್ಸನ್‌ಗಾರ್ಡನ್ ಪೋಲೀಸ್ ಠಾಣೆಗೆ ಒಯ್ದರು.

I.P.C.ಯ 143, 341, 506ರ ಸೆಕ್ಷನ್‌ನಡಿ ಕೇಸ್ ದಾಖಲಿಸಿದರು. ಪೋಲೀಸರೊಂದಿಗೆ ಪ್ರತಿಭಟನಾಕಾರರು 3 ಗಂಟೆಗಳಿಗೂ ಹೆಚ್ಚುಕಾಲ ವಾದ ಮಾಡಿದ ನಂತರ ಮಧ್ಯರಾತ್ರಿ 12ರ ಹೊತ್ತಿಗೆ ಎಲ್ಲರನ್ನು ಬಿಡುಗಡೆ ಮಾಡಿದರು. ಪೋಲೀಸರು ಬಂಧಿಸಿದ್ದು ಚಳುವಳಿಗಾರರ ಮೇಲೆ ಯಾವ ಪರಿಣಾಮವನ್ನು ಬೀರಲಿಲ್ಲ. ನರ್ಮದಾ ಸಾಲಿಡಾರಿಟಿ ಫೋರಂನವರು ಪತ್ರಿಕಾ ಹೇಳಿಕೆ ನೀಡಿ ಕೋರ್ಟಿನ ತೀರ್ಪನ್ನು ವಿರೋಧಿಸಿ ನರ್ಮದಾ ಕಣಿವೆಯ ಜನರ ಹೋರಾಟಕ್ಕೆ ಬೆಂಬಲ ಸೂಚಿಸಲು ಕರೆನೀಡಿದರು.

**ಕೊನೆಯವರೆಗೂ ಹೋರಾಡುವೆ**

ಸುಪ್ರೀಕೋರ್ಟಿನ ತೀರ್ಪು ಬಂದ ಸಂದರ್ಭದಲ್ಲಿ ನರ್ಮದಾ ಬಚಾವ್ ಆಂದೋಲನದ ಮೇಧಾಪಾಟ್ಕರ್ ಅವರು ಶೀಲಾಭಟ್ ಅವರಿಗೆ ನೀಡಿದ ಸಂದರ್ಶನದ ಭಾಗವಿದು.

* **ಸುಪ್ರೀ ಕೋರ್ಟ್ ತೀರ್ಪನ್ನು ಕುರಿತು ಏನು ಹೇಳುತ್ತೀರಿ?**

ಸರ್ಕಾರಿ ವರದಿಗಳು ನ್ಯಾಯಾಧೀಶರುಗಳ ಹಾದಿ ತಪ್ಪಿಸಿವೆ. ಕೇಸಿನ ಸತ್ಯಾಸತ್ಯತೆಗಳನ್ನು ಪರಿಗಣಿಸದೆ, ವ್ಯವಸ್ಥೆಯನ್ನೇ ಸಂಪೂರ್ಣ ನಂಬಿ ತೀರ್ಪು ನೀಡಿದ್ದು ನ್ಯಾಯಯುತವಲ್ಲ. ಪ್ರತಿ ನಿಮಿಷವು ಟ್ರಿಬ್ಯುನಲ್ ಅವಾರ್ಡ್ ಅನ್ನು ಧಿಕ್ಕರಿಸಲಾಗಿದೆ. ಕೋರ್ಟ್ ಪುನರ್‌ವಸತಿ ಯೋಜನೆಯನ್ನು ನಾಲ್ಕು ವಾರಗಳಲ್ಲಿ ತಯಾರಿಸಬೇಕೆಂದು ನರ್ಮದಾ ನಿಯಂತ್ರಣ ಪ್ರಾಧಿಕಾರವನ್ನು ಕೇಳಿದೆ. ಇದು ಅಸಾಧ್ಯ ಅಲ್ಲದೆ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಸರ್ಕಾರಗಳು ಒಂದೇ ಒಂದು ಹಳ್ಳಿಗಾಗುವಷ್ಟು ಭೂಮಿ ತಮ್ಮಲ್ಲಿ ಹಂಚಿಕೊಳ್ಳಲು ಇಲ್ಲವೆಂದು ಲಿಖಿತ ರೂಪದಲ್ಲಿ ತಿಳಿಸಿವೆ. ಮಧ್ಯಪ್ರದೇಶದ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರ ಹೇಳಿಕೆ ದಾಖಲಾಗಿದೆ. ಇನ್ನೇನು ಗೊತ್ತಾಗಬೇಕು ನಿಮಗೆ? ಈಗ ಜನರು ಕೋರ್ಟಿನ ತೀರ್ಪನ್ನು ತೀರ್ಮಾನಿಸುತ್ತಾರೆ.

* **ನಿಮ್ಮ ಮುಂದಿನ ಕಾರ್ಯತಂತ್ರವೇನು?**

ಗುಜರಾತ್ ಸರ್ಕಾರ ಅಣೆಕಟ್ಟು ನಿರ್ಮಾಣ ಶುರು ಮಾಡಲಿ ನಂತರ ತಿಳಿಸುವೆ. ನರ್ಮದಾ ಬಚಾವ್ ಆಂದೋಲನಕ್ಕೆ ವಿದೇಶಿ ಹಣ ಬರುತ್ತದೆ ಎಂದು ಆರೋಪಿಸಿರುವ ಜನರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ. ನಮ್ಮದೊಂದೇ ಸಂಸ್ಥೆ ಯಾವ ವಿದೇಶಿ ಹಣವನ್ನು ಸ್ವೀಕರಿಸುತ್ತಿಲ್ಲ. ನಾವು ಪ್ರಶಸ್ತಿಯ ಹಣವನ್ನು ಸಹ ಸ್ವೀಕರಿಸಿಲ್ಲ. ನನ್ನ ಹೋರಾಟ ಇಲ್ಲಿಗೆ ಮುಗಿಯುವುದಿಲ್ಲ, ಕೊನಯವರೆಗೂ ಹೋರಾಡುವೆ. ನನ್ನ ಹೃದಯ ಹೇಳುತ್ತಿದೆ ಹೋರಾಟ ಮುಂದುವರೆಸು ಎಂದು.

* **ತೀರ್ಪಿನ ಮುಖ್ಯ ಅಂಶ ಕುರಿತು ಹೇಳುತ್ತೀರಾ?**

ತೀರ್ಪು ಸರ್ವಾನುಮತದಿಂದ ಆದುದದದಲ್ಲ. ಇದೊಂದು ಬಹುಸಂಖ್ಯಾತ (majority) ತೀರ್ಪಾಗಿದೆ. ಸುಪ್ರೀಂ ಕೋರ್ಟ್ 90ಮೀ.ವರೆಗೆ ಅಣೆಕಟ್ಟು ಕಟ್ಟಲು ಅನುಮತಿ ನೀಡಿದೆ. ಆಗಲೆ 88 ಮೀ. ವರೆಗೂ ಕಟ್ಟಲಾಗಿದೆ. ಪ್ರತ 5 ಮೀ. ಕಟ್ಟಿದ ಮೇಲೆ ಪುನರ್ವಸತಿ, ಪರಿಸರ ಮತ್ತು ಅಹವಾಲು ಸೆಲ್‌ಗೆ ಸಂಬಂಧಿಸಿದ ಉಪ-ಗುಂಪುಗಳನ್ನು ಗುಜರಾತ್ ಸರ್ಕಾರವು ಸಂಪರ್ಕಿಸಿ ಅನುಮತಿ ಪಡೆಯಬೇಕಿತ್ತು. ಇದು ಗಮನಿಸಬೇಕಾದ ಅಂಶ. ಇಲ್ಲಿಯವರೆಗೂ ಹೀನಾಯವಾಗಿ ವಿಫಲವಾಗಿರುವ ವ್ಯವಸ್ಥೆಗೆ ಕೋರ್ಟುತನ್ನ ನಿಷ್ಠೆಯನ್ನು ತೋರಿದೆ.

ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ನ್ಯಾಯಾಧೀಶ ಎಸ್.ಪಿ. ಬರೂಚ ಅವರು ನ್ಯಾಯಾಧೀಶ ಎ.ಎಸ್. ಆನಂದ್ ಮತ್ತು ನ್ಯಾಯಾಧೀಶ ಬಿ. ಎನ್. ಕಿರ್‌ಪಾಲ ರೊಂದಿಗೆ ಸಮ್ಮತಿಸಿಲ್ಲ. ಯಾವ ಅಂಶ ಕುರಿತು ಅಸಮ್ಮತಿ ಸೂಚಿಸಿದ್ದಾರೊ ಆ ಅಂಶ ಬಹುಮುಖ್ಯವಾದುದು. ಪರಿಸರ ಸಂಬಂಧಿ ವಿಷಯವನ್ನು ಮರುಪರಿಶೀಲಿಸುವ ಮತ್ತು ಪರಿಸರ ಸಂಬಂಧಿ ವಿಷಯಗಳ ಕುರಿತು ಹೊಸದಾಗಿ ಪರಿಶೀಲಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

* **ತೀರ್ಪಿನಿಂದಾಗಿ ನಿಮ್ಮ ನಂಬಿಕೆಗೆ ಪೆಟ್ಟು ಬಿದ್ದಿದೆಯೇ?**

ಪ್ರಜಾಸತ್ತೆಯಲ್ಲಿ ಕಾನೂನಿಗೆ ಒಂದು ಸೀಮಿತ ಸ್ಥಾನವಿದೆ. ನಿಜ ನಾವು ಕೋರ್ಟಿಗೆ ಹೋದೆವು. ಅಣೆಕಟ್ಟು ಯೋಜನೆ ಬಲಿಪಶುಗಳಾಗುತ್ತಿರುವವರ ಜೀವ ಮತ್ತು ಜೀವನಾಧಾರದ ಬಗ್ಗೆ ಕಾಳಜಿ ಇದ್ದುದರಿಂದಾಗಿ ಕೋರ್ಟಿಗೆ ಹೋದೆವು. ಆ ಜನರ ಪರವಾಗಿ ನಿಂತೆವು. ಈಗಿನ ಜಾಗತೀಕರಣ, ಉದಾರೀಕರಣದಿಂದಾಗಿ ಹೆಚ್ಚು ಹೆಚ್ಚು ಜನರು ಹಾನಿಗೊಳ ಗಾಗಲಿದ್ದಾರೆ. ಹೋರಾಟ ಮುಂದುವರೆಯಲೇ ಬೇಕು. ನಾನು ಹೋರಾಟವನ್ನು ಬಿಡಲಾರೆ, ಬಿಡುವುದೂ ಇಲ್ಲ. ಇದೊಂದು ಸಾಂಕೇತಿಕ ಹೋರಾಟ. ಅಹಿಂಸಾತ್ಮಕ ವಾದುದು. ಆದರೆ ಈಗ ಯುದ್ಧದಂತಹ ಪರಿಸ್ಥಿತಿ ಬಂದಿದೆ. ಈ ವಿಷಯ, ಈ ಹೋರಾಟ, ಆಂದೋಲನವನ್ನು ಒಂದು ತಾರ್ಕಿಕ (logical) ಕೊನೆಗೆ ತಲುಪಿಸಲೇಬೇಕು. ಈಗಿನ ತೀರ್ಪು ತರ್ಕಬದ್ಧ ಕೊನೆಯಲ್ಲ. ಜನರಿಗೆ ಬೇರೆ ಆಯ್ಕೆಯೇ ಇಲ್ಲ. ಪರ್ಯಾಯ ಭೂಮಿಯ ವ್ಯವಸ್ಥೆ ಇಲ್ಲದೆ ಸ್ಥಳಾಂತರಗೊಳಿಸಿದರೆ ಜನ ಏನು ಮಾಡಬೇಕು?

ತೀರ್ಪು ನರ್ಮದಾ ಕಣಿವೆಯ ಜನರು, ಬರಪೀಡಿತ ಕಚ್ ಮತ್ತು ಸೌರಷ್ಟ್ರದ ಜನರು ಇಬ್ಬರಿಗೂ ದ್ರೋಹ ಬಗೆದಿದೆ ಯಾಕೆಂದರೆ ಬರ ಪೀಡಿತ ಜನರ ನೀರಿನ ಸಮಸ್ಯೆಗೆ ತೀರ್ಪು ಉತ್ತರವಿಲ್ಲ.

* **ನಿಮಗೆ ಸಾಕಾಗಿದೆಯೇ?**

ಇಲ್ಲ, ಆದರೆ ತುಂಬಾ ನಿರಾಶೆಯಾಗಿದೆ. ಪ್ರಜಾಸತ್ತಾತ್ಮಕ ಸಂಸ್ಥೆಗಳು ಮುಖ್ಯವೇ ಆದರೆ ಭರವಸೆ ಮುಂದಿನ ಜನಾಂಗದ ಬಗ್ಗೆಯೂ ಯೋಚಿಸಲು ಸಹಾಯ ಮಾಡುತ್ತದೆ. ತೀರ್ಪು ಮುಖ್ಯ, ಆ ರೀತಿಯ ಸಾಂಸ್ಥಿಕೃತ ಚಾನೆಲ್‌ಗಳೂ ಮುಖ್ಯ. ಆದರೆ ಇದು ಕಾನೂನಿನ ತೀರ್ಪು, ನಾನು ಮಾನವರ ತೀರ್ಪಿಗೆ ಕಾಯುವೆ. ಕಾನೂನಿನ ತೀರ್ಪು ಬಂದಿದೆ. ಮಾನವ ತೀರ್ಪು ಕೂಡ ಬರುತ್ತದೆ. ನಮ್ಮ ಹೋರಾಟದಲ್ಲಿ ಜನರಿಟ್ಟಿರುವ ನಂಬಿಕೆಯೇ ನಮ್ಮ ಶಕ್ತಿ, ಆ ಶಕ್ತಿಯನ್ನು ಯಾರು ಕೊನೆಗಾಣಿಸಲಾರರು.

*ಕನ್ನಡಕ್ಕೆ : ಸರಸ್ವತಿ ದು.*

## ಪುಷ್ಪಕ್ ಹಾಗೂ ಕುರುಡರು

'ಬೆಳಗು ರಾತ್ರಿಗಿಂತ ಭಿನ್ನವಾಗಿರುವುದಿಲ್ಲ' ನಿಜ, ಇಲ್ಲಿ ಸತ್ಯವಾಗಲೂ ಯಾವುದೇ ವ್ಯತ್ಯಾಸವಿಲ್ಲ. ಅವರು ಕುರುಡರು ಹಾಗಿದ್ದಾಗ, ಪುಷ್ಪಕ್ ಅಥವಾ ಇತರ ಬಸ್ಸುಗಳ ವ್ಯತ್ಯಾಸ ಕಟ್ಟಿಕೊಂಡು ಅವರಿಗೆ ಏನಾಗಬೇಕು? ಇತ್ತೀಚೆಗೆ ಒಂದು ಶುಕ್ರವಾರದಂದು ಬಿಸಿಲಿನ ಮಧ್ಯಾಹ್ನ. ನಾನು ಕೆಂಪೇಗೌಡ ಬಸ್ಸಿನಿಂದ ಜೀವನಭೀಮಾ ನಗರದ ಕಡೆಗೆ ಹೋಗುವ ಬಹುತೇಕ ಖಾಲಿ ಇದ್ದ ಪುಷ್ಪಕ್ ಬಸ್ಸಿನಲ್ಲಿ ಆರಾಮವಾಗಿ ಕುಳಿತುಕೊಂಡಿದ್ದೆ. ಒಬ್ಬ ಚಿಕ್ಕ ಕುರುಡ ಹುಡುಗಿ ಕಂಡೆಕ್ಟರ್ ಹತ್ತಿರ 'ಜೀವನಭೀಮಾ ನಗರ' ಎಂದು ಕೇಳಿದಳು. ಮಹಿಳಾ ಕಂಡೆಕ್ಟರ್ ಕಟುವಾಗಿ 'ಇದು ಪುಷ್ಪಕ್' ಎಂದಳು. 'ಓಹ್!' ಪಶ್ಚಾತ್ತಾಪದ ನಗೆಯಲ್ಲಿ ಕುರುಡ ಹುಡುಗಿ ಹಿಂದೆ ಸರಿದಳು. ಬಸ್ಸು ತಕ್ಷಣವೇ ಹೊರಟಿತು. ನನಗೆ ಆಘಾತ ಆಗಿತ್ತು. ಆ ಆಘಾತದಲ್ಲಿ ಆ ಹುಡುಗಿಗೆ ಕೇವಲ ಎಂಟು ರೂಪಾಯಿ ಕೊಟ್ಟು ಸಹಾಯಿಸುವುದು ನನಗೆ ಸಾಧ್ಯವಾಗಲಿಲ್ಲ.

ಕೆಲವು ಸಮಯದಲ್ಲಿ, ಅಸಹಾಯಕರ ಬಗ್ಗೆ ಸಂಪೂರ್ಣವಾಗಿ ಅಸಹಾಯಕರಾಗಿ ವರ್ತಿಸುವುದು ಮನುಷ್ಯರ ಸ್ವಭಾವ ದಲ್ಲೊಂದಾಗಿದೆ. ತಪ್ಪಿನ ಪ್ರಜ್ಞೆ ನನ್ನನ್ನು ಆವರಿಸಿಕೊಂಡಿದೆ. ನನ್ನ ಬೇಡಿಕೆಯೆಂದರೆ, ಕುರುಡರು ಎಲ್ಲಾ ಬಸ್ಸುಗಳಲ್ಲಿಯೂ ಸಹ ತಮ್ಮ ಮಾಮೂಲಿ ಪಾಸ್‌ಗಳಲ್ಲಿಯೇ ಓಡಾಡಲು ಅವಕಾಶ ಮಾಡಿಕೊಡಬೇಕು. ಏಕೆಂದರೆ ಅವರು ಪುಷ್ಪಕ್ ಹಾಗೂ ಇತರೇ ಸಿಟಿ ಬಸ್ಸುಗಳ ನಡುವೆ ವ್ಯತ್ಯಾಸ ಗುರುತಿಸಲಾರರು.

*ಂ ತಸ್ಲೀಮ್ ಶಾಹಿದ್*

ಸಂವೇದನೆ

# ಸಾವು ಹಾಗೂ ವೈಧವ್ಯದ ಆಚರಣೆ

**ಸಾ**ವು ಮನೆಯ ಬಾಗಿಲಿನ ಕದ ತಟ್ಟಿದೆ. ನಾವೂ ಅದೇನೊ ಮರೆವಿನಲ್ಲಿ ನಿದ್ದೆ ಮಾಡಿದ್ವಿ. ಅವನ ಹಣೆಯಲ್ಲಿ ಸಾವು ಬರೆದಿತ್ತು. ಅವನು ದೇವ್ರ ಬಳಿ ಹೋದ. ಅದನ್ನು ತಪ್ಪಿಸಲು ನಾವು ಯಾರು? ಅದು ಪರಮಾತ್ಮನ ಇಚ್ಛೆ, ಇಪ್ಪತ್ತೇಳು ವರ್ಷದ ಹೆಂಗರುಳಿನ ಮಗ ಹಾವು ಕಡಿದು ಸತ್ತ ದುಃಖವನ್ನು ತಡೆಯಲಾರದ ತಾಯಿ ತನಗೆ ತಾನೇ ಮಾತನಾಡುತ್ತಾ ಸಾಂತ್ವಾನ ಮಾಡಿಕೊಳ್ಳುತ್ತಾಳೆ. ಮಗನನ್ನು ಕಳೆದುಕೊಂಡ ದುಃಖವನ್ನು ಎಳೆಯ ಸೊಸೆಯೆದುರಿಗೆ ರೋಧಿಸಲಾಗದ ಹಿರಿಯ ಜೀವ. ಹದಿನೇಳರ ಹರೆಯದ ಸೊಸೆ. ಎದೆಬಿರಿಯುವ ಆಕ್ರಂದನಕ್ಕೆ ಅತ್ತೆಯ ಎದೆ ಬಿರಿಯುತ್ತದೆ.

ಮಗನ ತಿಥಿಯ ದಿನ ಸೊಸೆಯನ್ನು ಕರೆದು , "ನೀನು ಬಳೆ, ಕುಂಕುಮ, ಹೂವು, ಏನೂ ತೆಗೀಬೇಡಮ್ಮ, ಮಾಂಗಲ್ಯ ವೊಂದು ತೆಗೀಸಾಕು." ಅಂತ ಸಮಾಧಾನ ಮಾಡಿ, ತನ್ನ ಹತ್ತಿರದ ಬಂಧುಗಳಿಗೆ ಹೇಳಿ ಒಪ್ಪಿಸಿದಳು. ಆದರೆ ಸೊಸೆ ಯಾರ ಮಾತು ಕೇಳ್ಲಿಲ್ಲ. ಗಂಡನ ಸಮಾಧಿ ಬಳಿ ಕೈತುಂಬ ಹಾಕಿದ್ದ ಬಳೆಗಳನ್ನು ಕುಟ್ಟಿ ತಾನೇ ಒಡೆದು ಹಾಕಿದ್ಲು, ತಾಳೀ ಸರ ಕಿತ್ತು ಹಾಕಿದ್ಲು, ತಲೆಯಲ್ಲಿದ್ದ ಹೂಗಳನ್ನು ಕಿತ್ತುಹಾಕಿ, ಹಣೆಯ ಕುಂಕುಮವನ್ನು ಒರೆಸಿಕೊಂಡು, ಯಾರನ್ನು ಹತ್ತಿರ ಬರಗೊಡದೆ ಮನೆಗೆ ಓಡೋಡಿ ಬಂದಳು.

ನನ್ನ ಗೆಳತಿಯ ಅಕ್ಕನ ಗಂಡ ದಿಢೀರನೆ ಹೊಟ್ಟೆ ನೋವಿಂದ ಸಾವನ್ನಪ್ಪಿದ್ದರು. ಗಂಡನನ್ನು ಕಳೆದುಕೊಂಡ ದುಃಖದ ಮೇಲೆ ಬರೆಯುಳೆಯುವುದು ವೈಧವ್ಯರಾದ ಆಚರಣೆಗಳು. ಆಕೆ ಟೀಚರ್, ತಿಳುವಳಿಕೆ ಇರುವವಳು. ಆಕೆ ಮನೆಯಿಂದ ಹೊರಗೆ ಬಂದು ಯಾರಿಗೂ ಮುಖ ತೋರಿಸಬಾರದೆಂಬ ನಂಬಿಕೆ. ಆಕೆ ಮನೆಯಿಂದ ಹೊರಗೆ ಬಂದ ತಕ್ಷಣ ಮನೆಯಲ್ಲಿನ ಇತರ ವಯಸ್ಸಾದ ಹೆಂಗಸರು, ಅಯ್ಯೋ ಮನೆಯಿಂದ ಈಚೆ ಯಾಕೆ ಕರೆದು ಕೊಂಡು ಬಂದ್ರಿ' ಎಂದು ರಾಗವಳೆದರು. ಇದಕ್ಕಿಂತ ಹೆಚ್ಚಿನ ದುಃಖ ಕಾರ್ಯದ ದಿನ ಮಾಡ್ತಾರಲ್ಲ. ಆ ಶಾಸ್ತ್ರ ನನ್ನ ಗೆಳತಿಯ ಕಣ್ಣಲ್ಲಿ ನೀರು ತುಂಬಿಕೊಂಡಿತು. ಅಯ್ಯೋ ಇದನ್ನೆಲ್ಲಾ ಈಗ ಯಾಕೆ ಮಾಡ್ಬೇಕು. ಏನೋ ಮಾಂಗಲ್ಯ ತೆಗೀಬಹುದು. ಹೂವು, ಕುಂಕುಮವೆಲ್ಲಾ ನಾವು ಇಟ್ಟುಕೊಂಡು ಬರುತ್ತಿರ ಲಿಲ್ಲವೇ? ಆ ಶಾಸ್ತ್ರಗಳನ್ನೆಲ್ಲಾ ಮಾಡಲು ನೀವು ಕೂಡಬೇಡಿ ಎಂದು ಇನ್ನೊಬ್ಬ ಗೆಳತಿ ಹೇಳಿದ್ಲು.

ಅಯ್ಯೋ ನಾವು ಹೇಳಿದ್ರೆ ಕೇಳ್ತಾರ, ಮುಖ್ಯವಾಗಿ ಗಂಡನ ಮನೆಯವರು ಕೇಳಬೇಕಲ್ಲ. ಅವರು ಹೇಳಿದ್ದನ್ನೆಲ್ಲಾ ಮಾಡ್ಲೇಬೇಕು ಇಲ್ಲದಿದ್ದರೆ ಚುಚ್ಚಿ ಮಾತಾಡ್ತಾರೆ. ಹೀಗೆ ಮಾತನಾಡುವರೆಲ್ಲಾ ಹೆಂಗಸರೇ.

ಇನ್ನೊಬ್ಬ ಗೆಳತಿ "ನಮ್ಮ ತಾಯಿಗೆ ಮಲ್ಲಿಗೆ ಹೂವು ಅಂದ್ರೆ ತುಂಬಾ ಇಷ್ಟ. ನಮ್ಮ ತಂದೆ ಸತ್ತ ಮೇಲೆ, ನಮ್ಮ ತಾಯಿ ಹೂವು ಮುಡಿಯುವುದನ್ನು ನಿಲ್ಲಿಸಿದ್ರು. ನಮ್ಮ ತಾಯಿ ನೊಂದುಕೋತಾರೆ ಅಂತ ನಾನು ಎಷ್ಟೋದಿನ ಮಲ್ಲಿಗೆ ಹೂವನ್ನು ಮುಡಿಯೋದು ಬಿಟ್ಟೆ. ಆದ್ರೆ ನಮ್ಮ ಸೋದರ ಅತ್ತೆ ಮಾತ್ರ ಯಾರ ಮಾತು ಕೇಳ್ಲಿಲ್ಲ. ಅವರ ಗಂಡ ಸತ್ತಾಗ, ನಾನು ಯಾಕೆ ಬಳೆ ತೆಗೀಬೇಕು, ಕುಂಕುಮ ಯಾಕೆ ಅಳಿಸಬೇಕು, ಹೂವು ಯಾಕೆ ತೆಗೀಬೇಕು ಅಂತ ಎಲ್ಲರ ಬಳಿ ವಾದ ಮಾಡಿದ್ರು, ಯಾವುದನ್ನು ತೆಗೀಲಿಲ್ಲ.

ವೈಧವ್ಯದ ಆಚರಣೆ ಪುರುಷ ಸಂಸ್ಕೃತಿ ಸ್ತ್ರೀಯರ ಮೇಲೆ ಹೇರಿರುವ ವಿಕೃತವಾದ ಪದ್ಧತಿ. ಆದರೆ ಈ ಪದ್ಧತಿಯನ್ನು ಅಮಾನುಷವಾಗಿ ಜಾರಿಗೊಳಿಸುವವರು ಸ್ತ್ರೀಯರು. ಇದೇ ಪಿತೃಪ್ರಧಾನ ಸಂಸ್ಕೃತಿಯ ಜಾಣತನ. ವೈಧವ್ಯದ ಆಚರಣೆಯನ್ನು ಜಾರಿಗೆ ತರುವ ಒತ್ತಾಯವನ್ನು ಪುರುಷರೆಲ್ಲೂ ಮಾಡುವುದಿಲ್ಲ. ಈ ನಾಟಕದ ಸ್ಟೇಜ್ ಮೇಲೆ ಪುರುಷರು ಬರುವುದೇ ಇಲ್ಲ. ಪಿತೃಪ್ರಧಾನತೆ ಸ್ತ್ರೀಯರ ಮೇಲೆ ಹೇರಿರುವ ಈ ಕಟ್ಟುಪಾಡನ್ನು ಸ್ತ್ರೀಯರು ಚಾಚು ತಪ್ಪದೇ ಪಾಲಿಸುತ್ತಾರೆ. ಹೀಗೆ ಪಾಲಿಸುವಲ್ಲಿ ಸ್ತ್ರೀಯರು ಸ್ತ್ರೀಯರಿಗೆ ಶತ್ರುಗಳಂತೆ ಕಾಣುತ್ತಾರೆ.

ವೈಧವ್ಯ ಸ್ತ್ರೀಯರ ಲೈಂಗಿಕತೆಯ ಮೇಲೆ ಹೇರಿರುವ ಕಟ್ಟು ಪಾಡು. ಇದು ಪುರುಷರ ಪ್ರಾಧಾನ್ಯತೆ, ಜಾತಿಯ ಶುದ್ಧತೆಯನ್ನು ಕಾಪಾಡಿಕೊಳ್ಳುವ, ಆಸ್ತಿರಕ್ಷಣೆ ಹೀಗೆ ಎಲ್ಲಾ ಅಂಶಗಳನ್ನು ಒಳಗೊಂಡಿದೆ. ಈ ಜಾಣತನದ ವಂಚನೆಯನ್ನು ಸ್ತ್ರೀಯರು ಅರ್ಥಮಾಡಿಕೊಳ್ಳುವುದಿಲ್ಲ. ಇದು ಸ್ತ್ರೀಯರ ಆಯ್ಕೆ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ಹೂವು, ಕುಂಕುಮ, ಬಳೆ ತೆಗೆಯುವ ವೈಧವ್ಯದ ಸಂಕೇತಗಳನ್ನು ಆಳವಾಗಿ ಬೇರೂರಿಸು ವುದರ ಮೂಲಕ ಲೈಂಗಿಕ ನಿಷ್ಠೆಯನ್ನು ನಿರೀಕ್ಷಿಸುಲಾಗುತ್ತದೆ. ಈ ಸಂಕೇತಗಳು ಪುರುಷ ಸಂಸ್ಕೃತಿಯ ಹುನ್ನಾರಗಳು. ಇಂತಹ ಅಮಾನುಷ ಆಚರಣೆಗಳನ್ನು ಸ್ತ್ರೀಯರೇ ನಂಬುವಂತೆ ಮಾಡಿ, ಅವುಗಳನ್ನು ಪುರುಷರಿಗಿಂತ ಕಟ್ಟುನಿಟ್ಟಾಗಿ ಆಚರಿಸಿ ಪುರುಷ ಪ್ರಧಾನ ಸಂಸ್ಕೃತಿಯನ್ನು ಸ್ತ್ರೀಯರು ರಕ್ಷಿಸುವ ಬೇಲಿಯಾಗುತ್ತಾರೆ. ಸ್ತ್ರೀಯರಿಗೆ ಸ್ತ್ರೀಯರು ಶತ್ರುಗಳು ಎಂಬ ಬಿರುದನ್ನು ಪಡೆಯುತ್ತಾರೆ! ಹೇಗಿದೆ ಪಿತೃಪ್ರಧಾನತೆಯ ಹುನ್ನಾರ!

*○ ರಾಜೇಶ್ವರಿ ಎಚ್. ಎಸ್.*

# ವಿಧವೆಯರಾಗುವ ಕನಸು

ಎಂಟನೆಯ ತರಗತಿಯಿಂದ ಒಂಬತ್ತನೆಯ ತರಗತಿಗೆ ಹೋಗುತ್ತಿದ್ದ ಹಾಗೆ ನನ್ನ ಗೆಳತಿಯರ ಮನೆಯಲ್ಲೆಲ್ಲಾ ನಮ್ಮ ಮುಂದಿನ ವಿದ್ಯಾಭ್ಯಾಸದ ಬಗ್ಗೆ ವಿಚಿತ್ರವಾದ ಸ್ಮಶಾನ ಮೌನ ಅವರಿಸುತ್ತಿತ್ತು. ಯಾರ ಮನೆಯಲ್ಲೂ ನಿಮ್ಮನ್ನು ಮುಂದೆ ಓದಿಸ್ತೀವಿ ಅಂತ ಹೇಳ್ತಿರ್ಲಿಲ್ಲ. ನಾವು ಮುಂದೆ ಓದಬೇಕು ಅಂತ ಹಠ ಮಾಡಿದ್ರು ನಡೆಯತ್ತಿರಲಿಲ್ಲ. ನಮ್ಮ ಊರಿನಲ್ಲಿ S.S.L.C.ವರೆಗೆ ಮಾತ್ರ ಓದಲು ಅನುಕೂಲವಿತ್ತು. ಹೆಣ್ಣುಮಕ್ಕಳನ್ನು ಬೇರೆ ಊರಿಗೆ ಕಳಿಸಿ, ಹಾಸ್ಟೆಲಿನಲ್ಲೊ, ಬಂಧುಗಳ ಮನೆಯಲ್ಲಿ ಬಿಟ್ಟು ಓದಿಸುವುದನ್ನು .ತಂದೆ-ತಾಯಂದಿರು ಒಪ್ಪುತ್ತಿರಲಿಲ್ಲ. ಅದಕ್ಕಿಂತ ಮುಖ್ಯವಾಗಿ ಮದುವೆಯಾಗಿ ಹೋಗೋ ಇವರಿಗೆ ಹೆಚ್ಚು ವಿದ್ಯಾಭ್ಯಾಸ ಏಕೆ ಎಂಬುದು.

ನಾವು ಗೆಳತಿಯರೆಲ್ಲಾ ಒಬ್ಬರಿಗಿಂತ ಒಬ್ಬರು ಚುರುಕಾಗಿದ್ದೆವು. ಎಲ್ಲರ ನಡುವೆ ಓದುವುದರಲ್ಲಿ ಪೈಪೋಟಿ. ಎಲ್ಲರೂ ಆಶ್ಚರ್ಯವಾಗಿ ಹೆಚ್ಚು ಅಂಕಗಳನ್ನು ತೆಗೆಯುತ್ತಿದ್ದರು. ನಮ್ಮೆಲ್ಲ ಆಸಕ್ತಿಗೆ ಪ್ರೋತ್ಸಾಹದ ಮಾತುಗಳನ್ನಾಡಿ ನೀರೆರೆಯುತ್ತಿದ್ದವರು ಹೈಸ್ಕೂಲಿನ ಮಾಸ್ಟರುಗಳು ಮಾತ್ರ. ಆದರೆ ಮನೆಯಲ್ಲಿ ಮಾತ್ರ ಈ ವಿಷಯವನ್ನು ಕುರಿತು, ನಮ್ಮ ಆಸೆಯನ್ನು ಕೀರಲು ಧ್ವನಿಯಲ್ಲಿ ಹೇಳಲು ಅವಕಾಶವಿಲ್ಲದ ವಾತಾವರಣ. ಮುರಿಯಲಾಗದ ವಿಚಿತ್ರ ಮೌನವನ್ನು ಹುಟ್ಟುಹಾಕಲಾಗುತ್ತಿತ್ತು.

ನಮ್ಮ ಹೈಸ್ಕೂಲಿನಲ್ಲಿ ಓದಿದ ಹಿರಿಯ ವಿದ್ಯಾರ್ಥಿನಿಯರಲ್ಲಿ ಒಬ್ಬೊಬ್ಬರಿಗೆ ಮದುವೆಯಾಗುತ್ತಿತ್ತು. ಅವರಲ್ಲಿ ಜಯರತ್ನ ಒಬ್ಬಳು. ಉದ್ದನೆಯ ಎರಡು ಜಡೆ, ಗುಂಗುರು ಕೂದಲು, ದಾವಣಿ ಹಾಕಿಕೊಳ್ಳುತ್ತಿದ್ದಳು. ಅವಳ ಹೆಸರು ಜೆ. ರತ್ನ. ಆದರೆ ಅದನ್ನೆಲ್ಲರೂ ಜಯರತ್ನ ಮಾಡಿದ್ದರು. ಜಯರತ್ನಳ ಮದುವೆಯನ್ನು ಅದ್ದೂರಿಯಾಗಿ ಮಾಡಿದ್ದರು. ಮದುವೆಯಾಗಿ ಆರು ತಿಂಗಳು ಕೂಡಾ ಕಳೆದಿರಲಿಲ್ಲ. ಆಕೆಯ ಗಂಡ ಅಪಘಾತವೊಂದರಲ್ಲಿ ತೀರಿಕೊಂಡರು. ಆಗ ಆಕೆ ಗರ್ಭಿಣಿ.

ಈ ಬಾಲ ಗರ್ಭಿಣಿಯ ವಿಧವೆಯ ಸ್ಥಿತಿಯನ್ನು ಕಂಡು ಇಡೀ ಊರೇ ಮರುಗಿತು. ಆಕೆ ತವರು ಮನೆಗೆ ವಾಪಸ್ಸು ಬಂದಳು. ಹೆರಿಗೆಯಾಯಿತು. ಮನೆಯರೆಲ್ಲರೆಲ್ಲೂ ಕಣ್ಣೀರಿನೊಂದಿಗೆ ಆ ಮಗುವಿಗೆ ನೀರೆರೆದರು.

ಕರ್ನಾಟಕದ ಖ್ಯಾತ ಸರ್ವೋದಯ ನಾಯಕರಲ್ಲಿ ಎಣ್ಣೆಕೊಪ್ಪದ ಗೌಡ್ರು ಒಬ್ಬರು. ಅವರು ಮಾಡುತ್ತಿದ್ದ ಸಮಾಜ ಬದಲಾವಣೆಯ ಕೆಲಸದ ಮಹತ್ವವನ್ನು ಅಂದು ನಮಗೆ ಗ್ರಹಿಸಲಾಗುತ್ತಿರಲಿಲ್ಲ. ಅವರು ಗಾಂಧಿಜಯಂತಿಯ ದಿನ ಕೆಲವು ಕೇರಿಗಳಿಗೆ ಹೋಗಿ ರಸ್ತೆ ಬದಿಯಲ್ಲಿ ಮಕ್ಕಳು ಮಾಡಿರುತ್ತಿದ್ದ ಕಕ್ಕಸ್ಸನ್ನು ಎತ್ತಿ ಶುಚಿಗೊಳಿಸುತ್ತಿದ್ದರು. ಯಾರಿಗಾದರೂ ಕಾಯಿಲೆಯಾದರೆ ಸ್ವಮೂತ್ರ ಪಾನಪಾತ ಮಾಡಲು ಹೇಳುತ್ತಿದ್ದರು. ಮನೆ, ಆಸ್ತಿ, ಹೆಂಡತಿ, ಎಲ್ಲವನ್ನು ಬಿಟ್ಟು ಆಶ್ರಮವೊಂದನ್ನು ಕಟ್ಟಿ ಅಲ್ಲಿ ವಾಸಿಸುತ್ತಿದ್ದರು. ಅವರ ಸಮಕಾಲೀನರನ್ನು ಬಿಟ್ಟರೆ, ಬೇರೆಯವರು ಅವರನ್ನು ಗೇಲಿ ಮಾಡುತ್ತಿದ್ದರು.

ಈ ಸರ್ವೋದಯ ನಾಯಕರು ಜಯರತ್ನಳ ಮನೆಗೆ ಹೋಗಿ ಅವಳ ತಂದೆ-ತಾಯಿಯನ್ನು ಒಪ್ಪಿಸಿ ಅವಳು ವಿದ್ಯಾಭ್ಯಾಸವನ್ನು ಮುಂದುವರಿಸಿಕೊಂಡು ಹೋಗುವಂತೆ ಪ್ರೇರೇಪಿಸಿದರು. ಶಿವಮೊಗ್ಗೆಯಲ್ಲಿ ಒಂದು ಪುಟ್ಟ ಮನೆ ಮಾಡಿ ಆ ಎಳೆ ಮಗುವನ್ನು ಇಟ್ಟುಕೊಂಡು ಆಕೆ ಪಿ.ಯು.ಸಿ. ಮಾಡಿದಳು. ಪಿ.ಯು.ಸಿ. ಮುಗಿದ ನಂತರ ಆಕೆ ಎಂ.ಬಿ.ಬಿ.ಎಸ್. ಸೇರುವಂತೆ ಶ್ರಮವಹಿಸಿದರು.

ಜಯರತ್ನಳು ವಿದ್ಯಾಭ್ಯಾಸವನ್ನು ಮುಂದುವರಿಸಲು ಅವಕಾಶ ದೊರೆತ್ತಿದ್ದು, ನಮ್ಮೊಳಗಿನ ಆಸೆಯ ಎಳೆಗಳು, ಯಾವುದೋ ಒಂದು ಮೂಲೆಯಲ್ಲಿ ಗರಿಗೆದರಿತು. ಆಗ ನಾವು ಗೆಳತಿಯರೆಲ್ಲಾ, "ನಮಗೂ ಹೀಗೆ ಮದುವೆಯಾಗಿ ಗಂಡ ಸತ್ತು ವಿಧವೆಯಾದ್ರೆ ನಮ್ಮನ್ನು ಮುಂದೆ ಓದಿಸ್ತಾರೆ! ಹಾಗೆ ಮಾಡಪ್ಪ ದೇವ್ರೆ ಎಂದು ದೇವರನ್ನು ಪ್ರಾರ್ಥಿಸುತ್ತಾ ವಿಧವೆಯರಾಗುವ ಕನಸನ್ನು ಕಾಣುತ್ತಿದ್ದೆವು!

○ ರಾಜೇಶ್ವರಿ ಎಚ್. ಎಸ್.

# 'ಉತ್ತರವಿಲ್ಲದ ಪ್ರಶ್ನೆಗಳು'

## ಒಂದು ಪ್ರತಿಕ್ರಿಯೆ

ದಿನಾಂಕ 15-10-2000 ರಂದು ಪ್ರಜಾವಾಣಿಯ ಸಾಪ್ತಾಹಿಕ ಪುರುವಣಿಯ 'ಮಹಿಳೆ'ಅಂಕಣದಲ್ಲಿ ಶಮಂತಾರವರ 'ಉತ್ತರವಿಲ್ಲದ ಪ್ರಶ್ನೆಗಳು' ಲೇಖನವನ್ನು ಓದಿದಾಗ ಆಶ್ಚರ್ಯ ಹಾಗೂ ಸಿಟ್ಟು ಒಟ್ಟಿಗೆ ಮೂಡಿಬಂದವು. ಲೇಖಕಿಯು ತಮ್ಮ ಲೇಖನದಲ್ಲಿ ಎತ್ತಿರುವ ಕೆಲವು ಪ್ರಶ್ನೆಗಳು ಇಂತಿವೆ.

* ಮಹಿಳಾ ಅಂದೋಲನ ಕಾನೂನು, ಹಕ್ಕು, ಸಮಾನತೆಗೆ ಹೆಚ್ಚು ಒತ್ತು ನೀಡುತ್ತದೆ.
* ಮಹಿಳಾ ಆಂದೋಲನ 'ಮನೆ' 'ಮನಸ್ಸು'ಗೆ ಹೆಚ್ಚು ಒತ್ತು ನೀಡುತ್ತಿಲ್ಲ.
* ಗಂಡ-ಹೆಂಡತಿಯರ ಜಗಳದಲ್ಲಿ ಮೂರನೆಯವರ ಪ್ರವೇಶದಿಂದ ಸಂಬಂಧ ಕಡಿದು ಕೊಳ್ಳುತ್ತದೆ.
* ಸ್ವಂತ ಆಲೋಚನಾ ಶಕ್ತಿಯ ಆಧಾರದ ಮೇಲೆ ನಿರ್ಣಯ ತೆಗೆದು ಕೊಳ್ಳುವುದಕ್ಕಿಂತ ಬೇರೆಯವರ ನಿರ್ಣಯವನ್ನು ಒಪ್ಪಿಕೊಳ್ಳುವುದರಿಂದ ಇನ್ನಷ್ಟು ಸಮಸ್ಯೆಗೆ ಬಲಿಗಾಗುತ್ತಾಳೆ!

ಈ ಪ್ರಶ್ನೆಗಳನ್ನು ಕುರಿತು ಯೋಚಿಸುತ್ತಿದ್ದಂತೆ, ಇವುಗಳ ಹಿಂದಿರುವ ಲೇಖಕಿಯ ಅಪ್ರಬುದ್ಧತೆ ಹಾಗೂ ಧೋರಣೆ ಗೋಚರವಾಗುತ್ತದೆ.

ಮಹಿಳಾ ಆಂದೋಲನ ಕಾನೂನು, ಹಕ್ಕು, ಸಮಾನತೆಗೆ ಹೆಚ್ಚು ಒತ್ತು ನೀಡುತ್ತಾ, ಮನೆ, ಮನಸ್ಸು, ಮುಂತಾದವುಗಳಿಗೆ ಹೆಚ್ಚು ಒತ್ತು ನೀಡುತ್ತಿಲ್ಲ ಎಂದು ಶಮಂತಾರವರು ಮಹಿಳಾ ಆಂದೋಲನದಿಂದ ಹೊರಗೆ ನಿಂತು, ದೂರದಿಂದ ಸಲಹೆ, ಸೂಚನೆಗಳನ್ನು ನೀಡುವುದು ಸುಲಭ ಹಾಗೂ ಸರಳ. ಸಂವೇದನಾಶೀಲಳಾದ ಮಹಿಳೆ, ಆಂದೋಲನಗಳ ಹೊರಗಿದ್ದರು, ಬದುಕುವ ಕ್ರಮದಲ್ಲಿ ಜಾಗೃತ ಸ್ತ್ರೀಯಾಗಿ ಆಂದೋಲನಗಳ ಜೊತೆ ಜೊತೆಯೇ ಹೆಜ್ಜೆ ಹಾಕುತ್ತಾಳೆ. ಆದರೆ ತಮ್ಮನ್ನು ಸಂಪೂರ್ಣವಾಗಿ ಆಂದೋಲನಗಳಿಂದ ಪ್ರತ್ಯೇಕ ಗೊಳಿಸಿಕೊಂಡು, ಆಂದೋಲನಗಳನ್ನು ಅನುಮಾನ, ಸಂಶಯ ದೃಷ್ಟಿಯಿಂದ ನೋಡುತ್ತಲೇ ಅದರಿಂದ ದೊರೆಕುವ ಎಲ್ಲಾ ಸವಲತ್ತುಗಳನ್ನು ಪಡೆಯುತ್ತಲೇ ಇಂತಹ ಹೇಳಿಕೆಗಳನ್ನು ನೀಡುವುದು ಪುರುಷ ಪ್ರಧಾನ ಆಲೋಚನೆಯ ಮೂಲದಿಂದ ಮಾತ್ರ ಸಾಧ್ಯವಾಗುತ್ತದೆ.

ಮಹಿಳೆಯರ ಸಂಘಟನೆ, ಆಂದೋಲನಗಳ ಸಮಸ್ಯೆಯ ಮೂಲ ಮನೆ ಹಾಗೂ ಮನಸ್ಸು. ಆದರೆ ಶಮಂತಾರವರು ನಿರೀಕ್ಷಿಸುತ್ತಿರುವ ಮನೆ ಹಾಗೂ ಮನಸ್ಸಿನ ಕಲ್ಪನೆ ಏನು? ಪ್ರಸ್ತುತ ಪಿತೃಪ್ರಧಾನ ವ್ಯವಸ್ಥೆ ಹಾಗೂ ಪುರುಷ ಸಂಸ್ಕೃತಿಯ ಆಧಾರದ ಮೇಲೆ ರಚನೆಯಾಗಿರುವ 'ಮನೆ'ಯಲ್ಲಿ ಸ್ತ್ರೀ ತನ್ನ ಅಸ್ತಿತ್ವವನ್ನು ಹಾಗೂ ಸ್ವಂತಿಕೆಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಈ ಮನೆ ಪುರುಷ ಹಿತಾಸಕ್ತಿಯನ್ನು ಸಂಪೂರ್ಣವಾಗಿ ಕಾಯುತ್ತಿದೆ. ಹೆಣ್ಣಿನ ಅದೀನತೆಯನ್ನು ಸಾಂಸ್ಕೃತೀಕರಣಗೊಳಿಸುತ್ತಿದೆ. ಪುರುಷ ಸಂಸ್ಕೃತಿಯ ಈ ಎಳೆಗಳು ಮನೆಯಲ್ಲಿನ ವ್ಯಕ್ತಿಗಳ ನರನಾಡಿಯಲ್ಲೂ ಹರಿಯುತ್ತದೆ. ಪುರುಷ ಪ್ರಧಾನ ಮನೆಯ ಕಲ್ಪನೆಯ, ರಚನೆಯಲ್ಲಿ ಮೂಲಭೂತ ಬದಲಾವಣೆಯಾಗದ ಹೊರತು ವಿಚ್ಛೇದನ ಸಂಖ್ಯೆಯನ್ನು ಕಡಿಮೆ ಮಾಡುವುದರಿಂದ ಮಾತ್ರ 'ಮನೆ'ಯ ಕಲ್ಪನೆಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ.

ಈ ಮನೆ ಬೇಕಾಗಿರುವುದು ಕೇವಲ ಮಹಿಳೆಯರಿಗಲ್ಲ, ಮನೆ ಹಾಗೂ ಮದುವೆಯ ಮೂಲಭೂತ ಅವಶ್ಯಕತೆ ಮಹಿಳೆಯಗಿರುವಷ್ಟೆ, ಪುರುಷನಿಗೂ ಇದೆ. ಆದರೆ ಇವೆರೆಡೂ ಪುರುಷನ ಅದೀನತೆಯಲ್ಲಿವೆ. ಪುರುಷ ಪ್ರಧಾನ ಸಮಾಜ ಅದನ್ನು ಪುರುಷನಿಗೆ ಬಳುವಳಿಯಾಗಿ ನೀಡಿದೆ. ಬಹುಪಾಲು ಮಹಿಳೆಯರಿಗೆ (ತವರುಮನೆ, ಅಥವಾ ಗಂಡನ ಮನೆ) ಯಾವುದೂ ಅವಳ ಮನೆಯಾಗಿರುವುದಿಲ್ಲ. ಇವೆರಡನ್ನು ಪುರುಷ ತನ್ನ ಅನುಕೂಲಕ್ಕೆ ತಕ್ಕಂತೆ ಬಳಸುತ್ತಾನೆ. ಪುರುಷ ಮನಸ್ಸು ಮಾಡಿದರೆ ಮದುವೆಯನ್ನು ಮುರಿಯಬಹುದು, ಅವಳನ್ನು ಹೊರಗಟ್ಟಬಹುದು. ಮದುವೆ ಮಹಿಳೆಗೆ ಎಂದಿಗೂ

ಭದ್ರತೆಯನ್ನು ನೀಡಿಲ್ಲ ಆದರೆ ಮದುವೆ ಹೆಣ್ಣಿಗೆ ಭದ್ರತೆಯನ್ನು ನೀಡುತ್ತದೆಯೆಂಬ ಭ್ರಮೆಯಲ್ಲಿ ಹೆಣ್ಣುಮಕ್ಕಳನ್ನು ಬೆಳಸುವುದು ಒಂದು ಸಾಂಸ್ಕೃತಿಕ ವಿಪರ್ಯಾಸ. ಹಾಗಾಗಿ ಮದುವೆ ಹೆಣ್ಣಿಗೆ ಜೂಜಿನ ತರಹ.

ಮಹಿಳೆಯರ ವೈಯಕ್ತಿಕ ಬದುಕನ್ನು ರಾಜಕೀಯ ನೆಲೆಯಲ್ಲಿ ನೋಡಬೇಕೆಂಬುದು ಮಹಿಳಾ ಚಳುವಳಿಯ ಪ್ರಮುಖವಾದ ಆಶಯ. ಈ ಆಶಯದ ಪರಿಣಾಮವಾಗಿಯೇ ನಾಲ್ಕು ಗೋಡೆಯೊಳಗೆ ಹೆಣ್ಣಿನ ಮೇಲೆ ನಡೆಯುತ್ತಿರುವ ಅಮಾನುಷವಾದ ಕೌಟುಂಬಿಕ ಹಿಂಸೆಯನ್ನು ಬೆಳಕಿಗೆ ತರಲು ಸಾಧ್ಯವಾಗಿದೆ.

ಕುಟುಂಬ, ವೈವಾಹಿಕ ಜೀವನ ವೈಯುಕ್ತಿಕ ಎಂಬುದು ಪುರುಷ ಪ್ರಧಾನ ವ್ಯವಸ್ಥೆಯ ಕುಟಿಲ ಜಾಲ. ಗಂಡ ಹೆಂಡತಿಯರ ಜಗಳದಲ್ಲಿ ಮೂರನೆಯವರು ಪ್ರವೇಶ ಮಾಡಬಾರದೆಂಬ ಧೋರಣೆ ಹೆಣ್ಣಿನ ಮೇಲೆ ನಾಲ್ಕು ಗೋಡೆಯ ಒಳಗೆ ನಡೆಯುತ್ತಿರುವ ಹಿಂಸೆಯನ್ನು ನ್ಯಾಯಸಮ್ಮತಗೊಳಿಸಿ ದಂತಾಗುತ್ತದೆ. ಈ ಸಾಂಸ್ಕೃತಿಕ ಪರಿಕಲ್ಪನೆಗಳು ಪುರುಷ ಪ್ರಧಾನ ಸಂಸ್ಕೃತಿಯ ಹುನ್ನಾರಗಳು. ಈ ಹುನ್ನಾರಗಳು ಎಷ್ಟು ನವಿರಾದವು ಹಾಗೂ ಜಾಣತನದಿಂದ ಕೂಡಿದವು ಎಂದರೆ ಮಹಿಳೆಯರೇ ಇವುಗಳನ್ನು ಬಲವಾಗಿ ನಂಬುತ್ತಾರೆ.

ಕುಟುಂಬ ಮೂರನೆಯವರ ಪ್ರವೇಶ ಸಾಧ್ಯವಾಗದ ಭದ್ರಕೋಟೆ ಎನಿಸಿದೆ. ಸಾವಿರಾರು ಹೆಣ್ಣುಮಕ್ಕಳು ಕೌಟುಂಬಿಕ ಹಿಂಸೆಗೆ ಬಲಿಯಾಗುತ್ತಿದ್ದಾರೆ. ಹೊಡೆದು, ಕತ್ತುಹಿಸುಕಿ, ನೇಣುಹಾಕಿ, ಸೀಮೆಎಣ್ಣೆಯಲ್ಲಿ ಸುಟ್ಟು ಅವರನ್ನು ಸಾಯಿಸಲಾಗುತ್ತಿದೆ. ಈ ಭದ್ರಕೋಟೆಯಲ್ಲಿನ ಸಾವುಗಳಿಗೆ ಸಾಕ್ಷಿಗಳೇ ಇಲ್ಲ. ಇವು ಸಹಜ ಸಾವುಗಳೆಂದು ಸಹಜವಾಗಿಯೇ ದಾಖಲಾಗಿ ಬಿಡುತ್ತವೆ. ಎಷ್ಟೋ ಹೆಣ್ಣು ಮಕ್ಕಳು ಮೂರನೆಯವರ (ಅದು ಮಹಿಳಾ ಸಂಘಟನೆ, ಹೆಣ್ಣಿನ ತಂದೆ-ತಾಯಿ, ಅಕ್ಕ-ತಂಗಿ, ಸಹೋದರ ಯಾರು ಬೇಕಾದರೂ ಆಗಿರಬಹುದು) ಪ್ರವೇಶದಿಂದ ಗಂಡನ ಮನೆಯಲ್ಲಿ ನಡೆಯುವ ಮಾನಸಿಕ ಅಥವಾ ದೈಹಿಕ ಕ್ರೌರ್ಯದಿಂದ ಹೊರ ಬಂದು ಸ್ವಾಭಿಮಾನದಿಂದ ಬದುಕುವ ಧೈರ್ಯ ತೋರಿದ್ದಾರೆ. ಮೂರನೆಯವರ ಪ್ರವೇಶದಿಂದಲೇ ಸಾವಿನಂಚಿನಲ್ಲಿದ್ದ ಸಾವಿರಾರು ಹೆಣ್ಣುಮಕ್ಕಳು ಬದುಕಿ ಉಳಿದು ಜೀವಿಸುವ ಹಕ್ಕನ್ನು ಪಡೆಯಲು ಸಾಧ್ಯವಾಗಿದೆ. ಘನತೆಯಿಂದ ಬದುಕುವ ಅವಕಾಶಗಳು ಹೆಚ್ಚಿದೆ. ಪುರುಷ ಪ್ರಧಾನ ಸಂಸ್ಕೃತಿ, ವೈವಾಹಿಕ ಸಂಬಂಧವನ್ನು 'ಖಾಸಗಿ' ವೈಯಕ್ತಿಕ ಎಂದು ವ್ಯಾಖ್ಯಾನಿಸು ವುದರ ಮೂಲಕ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯವೇ ಹಿಂಸೆಯನ್ನು ನ್ಯಾಯಸಮ್ಮತ ಗೊಳಿಸುವ ರಹದಾರಿಯನ್ನು ನೀಡುತ್ತದೆ.

ಏರುತ್ತಿರುವ ವಿಚ್ಛೇದನಕ್ಕೆ ಗಂಡಿನ ಆಸೆ, ಹೆಣ್ಣಿನ ಅಪ್ರಭುದ್ಧ ಮನಸ್ಸು ಕಾರಣವೆನ್ನುವ ಶಮಂತಾರವರ ಹೇಳಿಕೆಯನ್ನು ತೆಗೆದುಕೊಳ್ಳೋಣ. ಇದು ಪುರುಷ ಕೇಂದ್ರಿತ ಮನೋಭಾವನೆಯಿಂದ ಮೂಡಿಬಂದ ಪ್ರತಿಕ್ರಿಯೆ. ಹೆಚ್ಚು ತ್ತಿರುವ ವಿಚ್ಛೇದನಕ್ಕೆ ಹೆಣ್ಣಿನ ಅಪ್ರಭುತ್ವ ಮನಸ್ಸು ಎಂಬ ಕಾರಣ ಎಷ್ಟರ ಮಟ್ಟಿಗೆ ವಾಸ್ತವ?

ಇಂದು ಮಹಿಳೆಯರು ಅನಿವಾರ್ಯವಾಗಿ ಮಾಡಿಕೊಳ್ಳ ಬೇಕಾದ ಹೊಂದಾಣಿಕೆಯಿಂದಲೇ ವೈವಾಹಿಕ ಸಂಬಂಧಗಳು ಉಳಿದುಕೊಂಡುಬರುತ್ತಿದೆ. ಅಮಾನುಷವಾದ ಕ್ರೌರ್ಯವನ್ನು ಎದುರಿಸುತ್ತಿದ್ದರು ಸಮಾಜದ ಒತ್ತಡ, ಆರ್ಥಿಕ ಅವಲಂಬನೆ ಮಕ್ಕಳ ಭವಿಷ್ಯ ಮುಂತಾದ ಆಲೋಚನೆಯಿಂದ ಮಹಿಳೆಯರು ತಮ್ಮ ವ್ಯಕ್ತಿತ್ವವನ್ನು ಬದಿಗೊತ್ತಿ ಹೊಂದಾಣಿಕೆ ಮಾಡಿ ಕೊಳ್ಳುತ್ತಾರೆ. ವೈವಾಹಿಕ ಸಂಬಂಧಗಳು ಇಂತಹ ಅನಿವಾರ್ಯತೆಯ ಮೇಲೆ, ಮಹಿಳೆಯರ ವೈಭವೀಕೃತ ತ್ಯಾಗದ ಕಲ್ಪನೆಯ ಮೇಲೆ ನಿಂತಿದೆ. ಶಮಂತಾರವರು ಹೇಳುವ ಹಾಗೆ ಮಹಿಳೆಯರು ಸಂಪೂರ್ಣ ಪ್ರಭುದ್ಧತೆಯ ಆಧಾರದ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳುವಂತಾದರೆ ವಿಚ್ಛೇದನದ ಪ್ರಮಾಣ ಇನ್ನು ಏರುತ್ತಲೇ ಹೋಗುತ್ತದೆ.

ಹೊಂದಾಣಿಕೆಯನ್ನು ಕೇವಲ ಹೆಣ್ಣು ಮಾಡಿಕೊಳ್ಳಬೇಕೆ? ಕುಟುಂಬದಲ್ಲಿ ಈಗ ಹೆಣ್ಣು ಮಾಡಕೊಳ್ಳುತ್ತಿರುವ ಹೊಂದಾಣಿಕೆ ಸಾಲದೆ? ಅಪ್ರಭುದ್ಧತೆ ಗಂಡಿನಲ್ಲಿಲ್ಲವೆ? ಕುಟುಂಬದಲ್ಲಿ ಹೊಂದಿಕೊಂಡು ಹೋಗುವ ಪ್ರಭುದ್ಧತೆ ಗಂಡಿಗೆ ಬೇಡವೆ?

ವೈವಾಹಿಕ ಸಂಬಂಧಗಳು 'ಸಮಾನತೆ'ಯ ನೆಲೆಯಲ್ಲಿ ರೂಪುಗೊಳ್ಳುವಂತಹ ಸಾಂಸ್ಕೃತಿಕ ವಾತಾವರಣ ರೂಪಿತ ವಾಗಬೇಕು. ಪುರುಷ ಕೇಂದ್ರಿತ ಸಂಸ್ಕೃತಿಯಿಂದ ಹೊರಬಂದು ಹೆಣ್ಣು - ಗಂಡು ಇಬ್ಬರ ಹಿತಾಸಕ್ತಿಯನ್ನು ಸಮಾನವಾಗಿ ಕಾಯುವ ತಳಹದಿಯ ಮೇಲೆ ರೂಪಿತಗೊಳ್ಳಬೇಕು. ಆಗ ಇಬ್ಬರೂ ಮಾಡಿಕೊಳ್ಳುವ ಹೊಂದಾಣಿಕೆ ಅರ್ಥಪೂರ್ಣ ವಾಗಿರುತ್ತದೆ.

# ಮನೆಕೆಲಸ ಮಾಡುವ ಹೆಣ್ಣುಮಕ್ಕಳ ಬವಣೆ

**ಕೊ**ಡಗು ಜಿಲ್ಲೆಯ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯೊಂದರಲ್ಲಿ ಉನ್ನತ ಹುದ್ದೆಯಲ್ಲಿರುವ ದಂಪತಿಗಳು. ಮನೆ ಕೆಲಸದ 18 ವರ್ಷದ ಹುಡುಗಿ ಯಾವುದೋ ಚಿಕ್ಕ ಪುಟ್ಟ ತಪ್ಪು ಮಾಡಿದಳೆಂದು ಈಳಿಗೆ ಮಣೆಯಲ್ಲಿ ಮುಖ ಮೂತಿ ನೋಡದೆ ಹೊಡೆದು, ಕಾಲಲ್ಲಿ ಒದ್ದು, ಆದ ಗಾಯಗಳಿಗೆ ಒಂದಿಷ್ಟು ಉಪಚರಿಸದೆ ಅವಳನ್ನು ಓಡಿಸಿದ ಘಟನೆ ಇತ್ತೀಚೆಗೆ ನಡೆದಿದೆ. ಹೊಡೆದ ಏಟಿಗೆ ತುಟಿ ಬಾತು ಹೋಗಿ ಎರಡು ದಿನ ರಕ್ತ ಸೋರಿದೆ. ಇದನ್ನು ಅಕ್ಕ ಪಕ್ಕದ ಮನೆಯವರು ಯಾರಾದರೂ ನೋಡಿ ಪೋಲೀಸರಿಗೆ ಪುಕಾರು ಮಾಡಬಹುದೆಂಬ ಭಯದಿಂದ ಮನೆಯೊಳಗೆ ಅವಳನ್ನು ಕೂಡಿಹಾಕಿ ಯಾರಲ್ಲೂ ಮಾತನಾಡ ಬಾರದೆಂದು ತಾಕಿತ್ತು ಮಾಡಿದ್ದರು. ಆದರೆ ಈ ಎಲ್ಲಾ ವಿಚಾರವನ್ನು ಒಂದು ವರ್ಷದಿಂದ ತಿಳಿದುಕೊಂಡಿದ್ದ ಅಕ್ಕ ಪಕ್ಕದ ಮನೆಯವರು ಮೌನವಾಗಿದ್ದುದು ನೋಡಿದರೆ ಸುಶಿಕ್ಷಿತರಾದ ಇವರೆಲ್ಲರೂ ಯಾವುದೋ ಎಂಜಲಿಗೆ ಶರಣು ಹೋಗಿರುವುದು ಭಾಸವಾಗುತ್ತದೆ.

ನಮ್ಮ ಸರಕಾರಗಳು ಶಿಕ್ಷಣ ಶಿಕ್ಷಣ ಎಂದು ಬೊಬ್ಬೆ ಹಾಕುತ್ತಲೇ ಇವೆ. ಅದರಲ್ಲೂ ಹೆಣ್ಣುಮಕ್ಕಳ 12 ವರ್ಷದ ಶಿಕ್ಷಣಕ್ಕೆ ತುಂಬಾ ಆದ್ಯತೆ ಕೊಡುತ್ತಿದೆ. ಈವತ್ತು ನಮ್ಮ ಸಮಾಜದಲ್ಲಿ ಇಂತಹ ಅನ್ಯಾಯ, ಅನಾಚಾರ, ದಗಲ್ಬಾಜಿ, ಲಂಚಗುಳಿತನ ಇವೆಲ್ಲವನ್ನು ಮಾಡ್ತಾ ಇರುವವರು ಸುಶಿಕ್ಷಿತರು. ಇಲ್ಲಿ ನಾವು ಯೋಚಿಸಬೇಕಾದುದು ಒಂದೇ- ಎಂತಹ ಶಿಕ್ಷಣವನ್ನು ನಾವು ಪಡೆಯುತ್ತ ಇದ್ದೇವೆ. ಸಮರಸವಾದ ಬಾಳನ್ನು ನಡೆಸಲು ಬುದ್ಧಿಯುಕ್ತ, ವಿವೇಕ ಪೂರ್ಣ ಮನುಷ್ಯರನ್ನು ಸೃಷ್ಟಿಸುವುದು ಶಿಕ್ಷಣದ ಗುರಿ. ಆದರೆ ಇಲ್ಲಿ ತಿರುಗುಮುರುಗಾಗುತ್ತಿದೆ.

ತನ್ನ ಮನೆಯವರ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ಒಂದಿಷ್ಟಾದರೂ ಸಹಾಯವಾಗುವುದೆಂಬ ಮಹದಾಸೆಯೊಂದಿಗೆ ಬಂದ ಹುಡುಗಿಗೆ ತನ್ನ ಹೆತ್ತವರಿಗೆ ಪತ್ರ ಬರೆಯುವ ಅವಕಾಶ ಕೂಡಾ ಇರಲಿಲ್ಲ. ಹಬ್ಬ ಹರಿದಿನಕ್ಕಾದರೂ ಅವರೊಂದಿಗಿರಬೇಕಾದ ಹುಡುಗಿ ಅದರಿಂದಲೂ ವಂಚಿತೆ. ದೂರದ ಊರಿಂದ ಬಂದಿದ್ದ ಈ ಹುಡುಗಿಗೆ, ಯಾವಾಗಲಾದರೊಮ್ಮೆ ತನ್ನ ಹೆತ್ತವರನ್ನು ಕರೆಸಿಕೊಂಡು ಸುಖಕಷ್ಟ ಹಂಚಿಕೊಳ್ಳುವ ಅವಕಾಶ ಕೂಡಾ ಇರಲಿಲ್ಲ. ಇಂತಹ ವಿಪರ್ಯಾಸ ನೋಡಿ!

ನಮ್ಮ ಮಕ್ಕಳ ಬಗ್ಗೆ ರಾತ್ರಿ ಹಗಲು ಯೋಚಿಸಿ ಅವರ ಏಳಿಗೆಯನ್ನು ಬಯಸುವ ನಾವು ಇನ್ನೊಬ್ಬರ ಕರುಳ ಕುಡಿಯನ್ನು ಎಷ್ಟೊಂದು ತಾತ್ಸಾರದಿಂದ ನೋಡುತ್ತೇವೆ.

ಜಿಲ್ಲೆಯ ಅಧಿಕಾರಿಯೊಬ್ಬರನ್ನು ಸಂಪರ್ಕಿಸಿ ಇಂತಹ ಹೆಣ್ಣುಮಕ್ಕಳ ಬಗ್ಗೆ ವಿಚಾರಿಸಿದಾಗ ಅವರು ಹೀಗೆಂದರು. ''ಸುಮಾರು ಐದು ವರ್ಷ ಕಾಲ ರಿಮಾಂಡ್ ಹೋಂನಲ್ಲಿ ದುಡಿದ ನನ್ನ ಅನುಭವದಲ್ಲಿ ಸುಶಿಕ್ಷಿತರ ಮನೆಯಲ್ಲಿ ದುಡಿಯುವ ಇಂತಹ ಹೆಣ್ಣುಮಕ್ಕಳೇ ನಮ್ಮಲ್ಲಿಗೆ ಹೆಚ್ಚು ಹೆಚ್ಚು ಬರುತ್ತಿದ್ದರು'' ಎಂದರು.

ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 10 ಗಂಟೆಯವರೆಗೂ ಮನೆಗೆಲಸ ಮಾಡುತ್ತಿದ್ದ ಈ ಹುಡುಗಿ ಪಾತ್ರೆ ತೊಳೆಯುವುದು, ಮನೆ ಗುಡಿಸುವುದು ಒರೆಸುವುದು, ಬಟ್ಟೆ ಒಗೆಯುವುದು, ಮಗುವನ್ನು ನೋಡಿಕೊಳ್ಳುವುದು ಮಾತ್ರವಲ್ಲದೆ ಅಡಿಗೆ ಕೆಲಸಕ್ಕೆ ಸಹಾಯ ಮಾಡಬೇಕು, ಮನೆ ಸುತ್ತ ಕಚಡಾ ತೆಗೆದು ಶುಚಿಯಾಗಿಡಬೇಕಿತ್ತು.

ಪಾಪ! ಈ ಪ್ರಾಯದ ಎಷ್ಟೊಂದು ಹೆಣ್ಣುಮಕ್ಕಳು ಇದೇ ತರಹದ ಮತ್ತು ಇದಕ್ಕಿಂತಲೂ ಭೀಕರವಾದ ಶೋಷಣೆಗೆ ಒಳಗಾಗುತ್ತಿದ್ದಾರೆ. ಭಾರತದಲ್ಲಿ ಎಷ್ಟು ಜನ ಮನೆಕೆಲಸ ಮಾಡುವವರಿದ್ದಾರೆ ಎಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಆದರೆ ಅಧಿಕ ಸಂಖ್ಯೆಯ ಅಂದರೆ 90% ಮನೆಗೆಲಸಗಾರರು ಮಹಿಳೆಯರೇ. ಈ ಮಹಿಳೆಯರ ಆರ್ಥಿಕ ಸ್ಥಿತಿಯಂತೂ ಶೋಚನೀಯ. ಸುಮಾರು ಶೇ. 74 ರಷ್ಟು ಮಹಿಳೆಯರ ಮಾಸಿಕ ಆದಾಯ ಸ್ಥಿತಿಯಂತೂ ಶೋಚನೀಯ. ಸುಮಾರು ಶೇ. 74ರಷ್ಟು ಮಹಿಳೆಯರ ಮಾಸಿಕ ಆದಾಯ 500/- ರೂ.ಗಿಂತ ಕಡಿಮೆ. ತಾವು ಸಂಪಾದಿಸಿದ ಹಣವನ್ನೆಲ್ಲಾ ತಮ್ಮ ಕುಟುಂಬದ ಜೀವನ ನಿರ್ವಹಣೆಗೆ ಖರ್ಚು ಮಾಡುವ ಇವರುಗಳು ಜೊತೆಯಲ್ಲಿ ಸಾಲವನ್ನು ಮಾಡಿರುತ್ತಾರೆ.

ಮನೆಗೆಲಸದ ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯದ ಅರಿವುಕೂಡಾ ಅವರನ್ನು ಕೆಲಸಕ್ಕೆ ಇರಿಸಿಕೊಂಡಿರುವವರಿಗೆ ಇರುವುದಿಲ್ಲ. ಅಸಂಘಟಿತರಾಗಿದ್ದು ಅತ್ಯಂತ ಶೋಷಿತ ಪರಿಸ್ಥಿತಿಯಲ್ಲಿರುವ ಇವರಿಗೆ ಯಾವುದೇ ಬಗೆಯ ಹಕ್ಕುಗಳಾಗಲೀ ಸವಲತ್ತುಗಳಾಗಲೀ ಇಲ್ಲ. ತಮ್ಮ ಅವಿರತ ದುಡಿಮೆಯಿಂದ ಎಷ್ಟೋ ಕುಟುಂಬಕ್ಕೆ ಒಳಿತಿದ್ದರೂ ಇಂತಹ ಮನೆಗೆಲಸ ಮಾಡುವ ಹೆಣ್ಣುಮಕ್ಕಳಿಗೆ ಮಾತ್ರ ಮಾನ್ಯತೆ ಇಲ್ಲದಿರುವುದು ವಿಷಾದನೀಯ.

*ಜಯಶ್ರೀ*

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

**ವಾರ್ಷಿಕ ಚಂದಾ : 50 ರೂ.**

**ಸಂಸ್ಥೆಗಳಿಗೆ : 100 ರೂ.**

*ಸಂ. ಮಂಡಳಿ*

REGD No. CPMG/KA/BGE/289/2000

BOOK -POST
PRINTED MATTER

ವಿಳಾಸ :
**ಮಾನಸ**
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067